بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّیْ عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 45–46

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

09, 16 ನವೆಂಬರ್ 2023, 09, 16 ನಬುವ್ವತ್ 1402 ಹಿಜರಿ ಶಮ್ಸಿ, 24, ರಬೀಉಲ್ ಸಾನಿ, 01 ಜಮಾದಿಉಲ್ ಅವ್ವಲ್ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَلَقَدْ صَرَّفْنَا فِيْ هٰذَا الْقُرْاٰنِ
لِلنَّاسِ مِنْ كُلِّ مَثَلٍ ۭ وَكَانَ
الْاِنْسَانُ اَكْثَرَ شَيْءٍ جَدَلًا

(ಅಲ್ ಕಹಫ್: 55)

ಅಂದರೆ: ನಾವು ಈ ಖುರ್‌ಆನಿನಲ್ಲಿ ಮನುಷ್ಯರಿಗೋಸ್ಕರ ಎಲ್ಲ ಉದಾಹರಣೆಗಳನ್ನು ವಿವರಿಸಿದ್ದೇವೆ. ಮನುಷ್ಯನಾದರೋ ಹೆಚ್ಚು ಕಲಹಶೀಲನಾಗಿದ್ದಾನೆ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಸುಳ್ಳು ಸಾಕ್ಷಿಯ ಮೂಲಕ ಇನ್ನೊಬ್ಬರ ಆಸ್ತಿಯನ್ನು ಪಡೆದುಕೊಳ್ಳುವ ವ್ಯಕ್ತಿಯು ಅಲ್ಲಾಹನನ್ನು ಎಂತಹ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ ಅಂದರೆ ಅಲ್ಲಾಹನು ಆತನಿಂದ ಬೇಸರಗೊಂಡಿರುವನು

(2416–17) ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: "ಯಾರು ಪ್ರಮಾಣ ವಚನ ಸ್ವೀಕರಿಸುತ್ತಾರೋ ಅವರು ಅದರಲ್ಲಿ ಸುಳ್ಳುಗನಾಗಿದ್ದರೆ, ಮತ್ತು ಇದರ ಮೂಲಕ ( ಪ್ರಮಾಣ) ಓರ್ವ ಮುಸಲ್ಮಾನನ ಆಸ್ತಿಯು ಪಡೆದುಕೊಂಡರೆ. ಆತನು ಅಲ್ಲಾಹನನ್ನು ಆತನ ಮೇಲೆ ಕೋಪಗೊಂಡಿದುವ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ. ಹಝ್ರತ್ ಅಶ್‌ಅಸ್(ರ) ಹೇಳುತ್ತಿದ್ದರು: ಅಲ್ಲಹನ ಆಣೆ!! ಈ ಮಾತನ್ನು ಹಝ್ರತ್ ಪೈಗಂಬರ್(ಸ) ರವರು ನನ್ನ ಬಗ್ಗೆಯೇ ಹೇಳಿರುವರು. (ಘಟನೆ ಹೀಗಿತ್ತು) ನನ್ನ ಮತ್ತು ಓರ್ವ ಯಹೂದಿಯ ಒಮದು ಭೂಮಿ ಇತ್ತು ಆತನು (ಯಹೂದಿ) ನನ್ನನ್ನು ಆ ಭೂಮಿಯಲ್ಲಿ ಹಖ್ಖಿಲ್ಲ ಎಂದು ನಿರಾಕರಿಸಿದನು. ಆದ್ದರಿಂದ ನಾನು ಹಝ್ರತ್ ಪೈಗಂಬರ್(ಸ) ರವರ ಬಳಿ ಹೋದಾರ ರಸೂಲುಲ್ಲಾಹ್(ಸ) ರವರು ನನಗೆ ಕೇಳಿದರು: ನಿಮ್ಮ ಬಳಿ ಏನಾದರೂ ಪುರಾವೆಗಳಿವೆಯೇ? ಅದಕ್ಕೆ ನಾನು ಹೇಳಿದೆ: ಇಲ್ಲ (ಹಝ್ರತ್ ಅಶ್‌ಅಸ್) ಹೇಳುತ್ತಿದ್ದರು: ನೀವು(ಸ) ಆ ಯಹೂದಿಗೆ ಪ್ರಮಾಣ ಮಾಡಿ ಹೇಳಲು ಹೇಳಿದರು. ಅದಕ್ಕೆ (ಹಝ್ರತ್ ಅಶ್‌ಅಸ್) ಹೇಳುತ್ತಾರೆ: ಯಾ ರಸೂಲಲ್ಲಾಹ್! ಅವನು ಪ್ರಮಾಣ ಮಾಡುತ್ತಾನೆ ಮತ್ತು ನನ್ನ ಸಂಪತ್ತು ಹೋಗುತ್ತದೆ, ಆಗ ಸರ್ವಶಕ್ತನಾದ ಅಲ್ಲಾಹನು ಈ ವಚನವನ್ನು ಅವತರಿಸಿದನು: ಅಲ್ಲಾಹನ ಒಪ್ಪಂದ ಮತ್ತು ಅವರ ಪ್ರಮಾಣಗಳಿಗೆ ಪ್ರತಿಂಯಾಗಿ ಸಣ್ಣ ಮೊತ್ತವನ್ನು ತೆಗೆದುಕೊಳ್ಳುವವರು. **(ಸಹೀಹ್ ಬುಖಾರಿ, ಸಂಪುಟ 4, ಕಿತಾಬ್ ಅಲ್–ಖುಸುಮಾತ್, 2008 ಖಾದಿಯಾನ್ ಪ್ರಕಟಿತ)**

ತನ್ನ ಜೀವನವನ್ನು ದೇವರಿಗೆ ಅರ್ಪಿಸುವವನು ನಿರ್ಗತಿಕನಾಗುವುದಿಲ್ಲ ಖಂಡಿತವಾಗಿಯೂ ನಿರ್ಗತಿಕನಾಗುವುದಿಲ್ಲ. ಬದಲು ಧರ್ಮ ಹಾಗೂ ದೇವನಿಗೆ ಸಮರ್ಪಿತನದ ಮನುಷ್ಯನು ಇನ್ನಷ್ಟು ಜಾಗೃತ ಹಾಗೂ ಚುರುಕು ಬುದ್ಧಿಯವನಗುತ್ತಾನೆ. ಬೇಸರವಾಗಲಿ ಉದಾಸೀನತೆಯಾಗಲೀ ಅವನ ಹತ್ತಿರ ಸುಳಿಯುವುದಿಲ್ಲ.

ನಮ್ಮ ಪ್ರವಾದಿ ಮುಹಮ್ಮದ್ (ಸ)ರು ಯಾವಾಗಲೂ ಉದಾಸೀನತೆಯಿಂದ ದೂರ ಉಲಿಯಬಯಸುತ್ತಿದ್ದರು, ನಾನು ಮತ್ತೊಮ್ಮೆ ಹೇಳುವೆನು ಉದಸೀನರಾಗಬೇಡಿರಿ.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಸರ್ವಶಕ್ತನಾದ ಅಲ್ಲಾಹನು ಹೀಗೆ ಪ್ರಾರ್ಥನೆಯನ್ನು ಕಲಿಸಿದನು **ರಬ್ಬನಾ ಆತಿನಾ ಫಿದ್ದುನಿಯಾ ಹಸನತೌಂ ವಫಿಲ್ ಆಖಿರತಿ ಹಸನತೌಂ ವಖಿನಾ ಅಝಾಬನ್ನಾರ್** (ಅಲ್ ಬುಖರ–202) ಈ ಪ್ರಾರ್ಥನೆಯಲ್ಲಿಯೂ ಲೌಕಿಕತೆಗೆ ಪ್ರಾದಾನ್ಯತೆ ನೀಡಲಾಗಿದೆ, ಆದರೆ ಯಾವ ಲೌಕಿಕತೆ? **ಹಸನತದ್ದುನಿಯಾ**–ವನ್ನು ಅದು ಪರಲೋಕಕ್ಕಾಗಿ ಹಿತಕಾರಿಯಾಗಿರಬೇಕು. ಈ ಪ್ರಾರ್ಥನೆಯಿಂದ ಸ್ಪಷ್ಟವಾಗುವುದೇನೆಂದರೆ ಸತ್ಯವಿಶ್ವಾಸಿಯೊಬ್ಬನಿಗೆ ಲೌಕಿಕತೆಯಲ್ಲಿ ಪರಲೋಕದ ಹಿತಚಿಂತನೆಯಿರಬೇಕು. ಮತ್ತು ಅದರ ಜೊತೆಯಲ್ಲೇ **ಹಸನತದ್ದುನಿಯಾ** ಪದದಲ್ಲಿ ಇಹಲೋಕದ ಎಲ್ಲಾ ಉತ್ತಮ ಮಾರ್ಗಗಳನ್ನು ಉಪಯೋಗಿಸಲು ನಿರ್ದೇಶನ ನೀಡಲಾಗಿದೆ. ಉತ್ತಮ ಮಾರ್ಗದಿಂದ ಅದನ್ನು ಹಿತವಾದ ರೀತಿಯಲ್ಲಿ ಇಹಜೀವನ ನಡೆಸಬಹುದು. ಬದಲು ಮಾನವರನ್ನು ದುಃಖಕ್ಕೆ ತಳ್ಳುವ ರೀತಿಯಲ್ಲಿ ಜೀವನ ನಡೆಸಕೂಡದು. ಆಗ ನಿಸ್ಸಂಶಯವಾಗಿಯೂ ಅದು ಪರಲೋಕದ ಹಿತಕ್ಕೂ ಕಾರಣವಾಗುತ್ತದೆ.

ಆದ್ದರಿಂದ ನೆನಪಿಡಿರಿ. ತನ್ನ ಜೀವನವನ್ನು ದೇವರಿಗೆ ಅರ್ಪಿಸುವವನು ನಿರ್ಗತಿಕನಾಗುವುದಿಲ್ಲ, ಖಂಡಿತವಾಗಿಯೂ ನಿರ್ಗತಿಕನಾಗುವುದಿಲ್ಲ. ಬದಲಿಗೆ ಧರ್ಮ ಹಾಗೂ ದೇವನಿಗೆ ಸಮರ್ಪಿತನಾದ ಮನುಷ್ಯನು ಇನ್ನಷ್ಟು ಜಾಗೃತ ಹಾಗೂ ಚುರುಕು ಬುದ್ಧಿಯುಳ್ಳನವಾಗುತ್ತಾನೆ. ಬೇಸರವಾಗಲಿ ಉದಾಸೀನತೆಯಾಗಲೀ ಅವನ ಹತ್ತಿರ ಸುಳಿಯುವುದಿಲ್ಲ ಹದೀಸಿನಲ್ಲಿದೆ. ಅಮ್ಮಾರ್ ಬಿನ್ ಖಝೀಮ ವರದಿ ಮಾಡುತ್ತಾರೆ. ಹಝ್ರತ್ ಉಮರ್(ರ) ಒಮ್ಮೆ ನನ್ನ ತಂದೆಯವರಿಗೆ ಹೇಳಿದರು. ನಿನಗೆ ಯಾವ ವಿಷಯವು ನೆಲದಲ್ಲಿ ಸಸ್ಯ ನೆಡಲು ತಡೆಹಿಡಿದಿದೆ. ಆಗ ನನ್ನ ತಂದೆ ಉತ್ತರಿಸಿದರು. ನಾನು ವೃದ್ಧನಾಗಿದ್ದೇನೆ. ನಾಳೆ ಸಾಯಬಹುದು. ಆಗ ಅವರಿಗೆ ಹಝ್ರತ್ ಉಮರ್(ರ) ಹೇಳಿದರು. ಹಾಗಾದರೆ ಅವಶ್ಯವಾಗಿ ನಿನಗೆ ಸಸ್ಯನೆಡಬೇಕಾಗಿದೆ. ನಾನು ಹಝ್ರತ್ ಉಮರ್ (ರ) ರನ್ನು ಅವರು ಸ್ವತಃ ನನ್ನ ತಂದೆಯವರ ಜೊತೆ ಒಳಗೂಡಿ ನಮ್ಮ ಭೂಮಿಯಲ್ಲಿ ಸಸ್ಯಗಳನ್ನು ನೆಡುತ್ತಿದ್ದದ್ದನ್ನು ನೋಡಿದೆ. ಅದೇ ರೀತಿ ನಮ್ಮ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಯಾವಾಗಲೂ ಉದಾಸೀನತೆಯಿಂದ ದೂರ ಉಳಿಯುತ್ತಿದ್ದರು. ನಾನು ಮತ್ತೊಮ್ಮೆ ಹೇಳುವೆನು, ಉದಾಸೀನರಾಗಬೇಡಿರಿ. ಅಲ್ಲಾಹನು ಸಂಸಾರ ಮಾಡಲು ತಡೆಯುವುದಿಲ್ಲ ಆದರೆ ಉತ್ತಮ ಸಂಸಾರಕ್ಕಾಗಿ ಪ್ರಾರ್ಥನೆಯ ಶಿಕ್ಷಣ ನೀಡುತ್ತಾನೆ. ಅಲ್ಲಾಹನು ಮನುಷ್ಯನು ಆಲಸಿಯಾಗಿ ಕುಳಿತುಕೊಳ್ಳುವುದು ಇಷ್ಟಪಡುವುದಿಲ್ಲ. ಬದಲಿಗೆ ಅವನು ಸ್ಪಷ್ಟವಾಗಿ ಹೇಳಿದನು. **ಲೈಸ ಲಿಲ್ ಇನ್ಸಾನಿ ಇಲ್ಲಾ ಮಾ ಸಆ** (ಅನ್ನಜ್ಮ–40) ಆದ್ದರಿಂದ ಸತ್ಯವಿಶ್ವಾಸಿಯೊಬ್ಬನಿಗೆ ಕಾರ್ಯಾಶೀಲರಾಗಿರಬೇಕಾಗಿದೆ. ಆದರೆ ಮತ್ತೊಮ್ಮೆ ಮಗದೊಮ್ಮೆ ಸಾಧ್ಯವಾದಷ್ಟು ಫಲ ಹೇಳುವೆನು ಲೌಕಿಕತೆಯೇ ಗುರಿಯಾಗಿರಬಾರದು ಧರ್ಮವೇ ಗುರಿಯಾಗಿರಬೇಕು. ಲೌಕಿಕತೆಯೂ ಧರ್ಮದ ಆಳಾಗಿ ಸೇರಿಸಿಕೊಳ್ಳಬೇಕು ಶ್ರೀಮಂತರಿಗೆ ಇಂತಹ ಹೆಚ್ಚಿನ ಅವಕಾಶ ದೊರೆಯುತ್ತದೆ ಆದರೆ ಬಡಬಗ್ಗರಿಗೆ ಇಂತಹ ಅವಕಾಶಗಳು ದೊರೆಯುವುದಿಲ್ಲ. ರಸೂಲುಲ್ಲಾಹ್(ಸ) ರವರ ಕಾಲದಲ್ಲಿ ಪ್ರಥಮ ಖಲೀಫರಿಗೆ ಅವರು ಉತ್ತಮ ದರ್ಜೆಯ ವ್ಯಾಪಾರಿಯಾಗಿದ್ದರು. ಅದ್ವಿತೀಯ ಸಹಕಾರ ನೀಡಿದ್ದಾರೆ. ಅದರ ಫಲವಾಗಿ ಅವರಿಗೆ "ಸಿದ್ದೀಖ್" ಎಂಬ ಪದವಿ ದೊರೆಯಿತು. ಮತ್ತು ಅವರು ಮೊದಲು ಸ್ನೇಹಿತರಾದರು, ಮತ್ತೆ ಪ್ರಥಮ ಖಲೀಫರಾದರು.

**(ಮಲ್ಫೂಝಾತ್, ಸಂಪುಟ 1, ಪುಟ 494, ಮುದ್ರಣ 2018 ಖಾದಿಯಾನ್)**

### *128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

ಇಂದಿನ ಮುಲ್ಲಾಗಳು ಇಂತಹ ಘಟನೆಗಳನ್ನು ಉಲ್ಲೇಖಿಸಿ, ಪ್ರವಾದಿ ನಿಂದೆಯನ್ನು ಮಾಡುವವರನ್ನು ವಧಿಸಬೇಕು ಎಂದು ಸಾಬೀತುಪಡಿಸಲು ಪ್ರಯತ್ನಿಸುತ್ತಾರೆ. ಆದರೆ ಪ್ರವಾದಿನಿಂದೆಗೆ ಯಾವುದೇ ರೀತಿಯ ಶಿಕ್ಷೆ ಇಸ್ಲಾಮಿನಲ್ಲಿ ಇಲ್ಲ. ಇಂತಹ ಘಟನೆಗಳಿಗೆ ಯಾವುದೇ ಆಧಾರವಿಲ್ಲ.

ಬಹುದೇವತಾವಾದಿಗಳು ತಮ್ಮ ಬಹುದೇವತಾವಾದವನ್ನು ಧರ್ಮವೆಂದು ಪರಿಗಣಿಸಿದ್ದಾರೆ ಮತ್ತು ಏಕ ದೇವರ ಆರಾಧನೆಯನ್ನು ದಾರಿತಪ್ಪಿ ಎಂದು ಪರಿಗಣಿಸಿದ್ದಾರೆ. ಇಂದಿಗೂ ಇದೇ ಪರಿಸ್ಥಿತಿ ಇದೆ.

ಉಮ್ಮೈರ್ ಬಿನ್ ವಹಬ್ ಇಸ್ಲಾಮ್ ಧರ್ಮ ಸ್ವೀಕರಿಸಿದ ಘಟನೆಯ ವಿಶ್ವಾಸ ವರ್ಧಕ ಪ್ರಸ್ತಾವನೆ.

ಉಮ್ಮೈರ್ ಹೇಳಿದನು: ನಾವಿಬ್ಬರು ಮಾತುಕತೆ ನಡೆಸುವಾಗ ಅಲ್ಲಿ ಮೂರನೆಯವನಾಗಿ ಯಾರೂ ಇರಲಿಲ್ಲ. ಆದ್ದರಿಂದ ಹಝ್ರ‌ತ್ ಪೈಗಂಬರ್(ಸ)ರಿಗೆ ಈ ಸಂಗತಿಯನ್ನು ಅಲ್ಲಾಹನಲ್ಲದೇ ಬೇರೆ ಯಾರೂ ಹೇಳಿರಲು ಸಾಧ್ಯವಿಲ್ಲ.

**ಹಿಜ್ರತಿನ ನಂತರ ಹಝ್ರ‌ತ್ ಪೈಗಂಬರ್(ಸ) ಹಿಜರೀ 2, ಶವ್ವಾಲ್ ಮಾಸದಲ್ಲಿ ಅಲ್ಲಾಹನ ಆಜ್ಞೆ ಪ್ರಕಾರ ಮುಸ್ಲಿಮರ ಮೊದಲ ಈದುಲ್ ಫಿತ್ರನ್ನು ಆಚರಿಸಿದರು.**

ಹಝ್ರ‌ತ್ ಪೈಗಂಬರ್(ಸ) ಬನೂ ಸುಲೈಂ ಮತ್ತು ಬನೂ ಗ‌ತ್‌ಫಾನಿನ ಕಡೆಗೆ ಹೋಗಲು ತೀರ್ಮಾನಿಸಿದರು ಮತ್ತು ಮುನ್ನೂರು ಸಹಾಬಿಯರ ಜೊತೆಗೆ ಅವರು ಸ್ವತಃ ಕರ್ಕರತುಲ್ ಕುದ್ರ್ ಕಡೆಗೆ ಹೊರಟರು.

ಬದ್ರ್ ಯುದ್ಧದ ನಂತರ ಕೆಲವು ಜನರು ಮುಸ್ಲಿಮರಾದರು. ಆದರೆ ಅವರು ಕಪಟತೆಯನ್ನು ಹೊಂದಿದ್ದರು. ಅಂಥವರಲ್ಲಿ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್ ಕೂಡ ಇದ್ದನು.

**ಬದರ್ ಯುದ್ಧದ ನಂತರ ಸಂಭವಿಸಿದ ಕೆಲವು ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **29-09-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಬದ್ರ್ ಯುದ್ಧದ ನಂತರದ ಘಟನೆಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದೆ. ಈ ಘಟನೆಗಳಿಂದ ನಮಗೆ ಹಝ್ರ‌ತ್ ಪೈಗಂಬರ್(ಸ)ರ ಜೀವನಚರಿತ್ರೆಯ ಘಟನೆಗಳ ಬಗ್ಗೆ ಗೊತ್ತಾಗುತ್ತದೆ. ಅದರೊಂದಿಗೆ ಇತಿಹಾಸದ ಅಧ್ಯಯನ ಮಾಡುವಾಗ ಕೆಲವು ಚಾರಿತ್ರಿಕ ಸಂಗತಿಗಳ ಬಗ್ಗೆಯೂ ತಿಳಿದುಬರುತ್ತದೆ ಮತ್ತು ಕೆಲವು ತಪ್ಪಾದ ವರದಿಗಳ ಬಗ್ಗೆಯೂ ಗೊತ್ತಾಗುತ್ತದೆ. ಅಂತಹ ವರದಿಗಳು ಇಸ್ಲಾಮಿನ ಬಗ್ಗೆ ತಪ್ಪಾದ ಮುಖವನ್ನು ಅನ್ಯರ ಮುಂದೆ ಪ್ರಸ್ತುತಪಡಿಸಿವೆ ಮತ್ತು ಇಸ್ಲಾಮಿಗೆ ಕೆಟ್ಟ ಹೆಸರು ತರಲು ಇಸ್ಲಾಮಿನ ವಿರೋಧಿಗಳು ಅವುಗಳನ್ನು ದುರುಪಯೋಗಿಸುತ್ತಾರೆ ಹಾಗೂ ತೀವ್ರತೆಯನ್ನು ಇಷ್ಟಪಡುವ ಮುಸ್ಲಿಮರು ತಮ್ಮ ಉದ್ದೇಶಗಳನ್ನು ಸಾಧಿಸುವ ಗುರಿಯನ್ನು ಗಳಿಸುತ್ತಾರೆ.

ಇಂದು ನಾನು ವಿವರಿಸಲು ಹೋಗುವ ಮೊದಲ ಘಟನೆ ಉಮ್ಮೈರ್ ಬಿನ್ ವಹಬ್‌ರದ್ದಾಗಿದೆ. ಅವರು ಯುದ್ಧದ ನಂತರ ತನ್ನ ಮತ್ತು ಮುಶ್ರಿಕರ ಸೋಲಿನ ಸೇಡನ್ನು ತೀರಿಸಲು ಮತ್ತು ಹಝ್ರ‌ತ್ ಪೈಗಂಬರ್(ಸ)ರನ್ನು ವಧಿಸಲು ಮಕ್ಕದಿಂದ ಮದೀನಕ್ಕೆ ಬಂದಿದ್ದರು. ಆದರೆ ಅಲ್ಲಿ ಅಲ್ಲಾಹನ ವಿಧಿಯು ಬೇರೆಯೇ ಕೆಲಸವನ್ನು ಮಾಡಿತು ಮತ್ತು ಅವರಿಗೆ ಇಸ್ಲಾಂ ಸ್ವೀಕಾರ ಮಾಡುವ ಸೌಭಾಗ್ಯ ಲಭಿಸಿತು. ಇದರ ವಿಶದ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಬದ್ರಿನ ಕೈದಿಗಳಲ್ಲಿ ವಹಬ್ ಬಿನ್ ಉಮ್ಮೈರ್ ಕೂಡ ಇದ್ದನು. ಈತನನ್ನು ರಿಫಾ ಬಿನ್ ರಾಫಿ ಬಂಧಿಸಿದ್ದರು. ಆತನ ತಂದೆಯಾದ ಉಮ್ಮೈರ್ ಬಿನ್ ವಹಬ್ ಖುರೈಶಿಗಳ ಮುಖಂಡರಲ್ಲಿ ಒಬ್ಬರಾಗಿದ್ದರು. ಅಂದರೆ ಉಮ್ಮೈರ್ ಬಿನ್ ವಹಬ್ ಅವರು ಮಕ್ಕಾದಲ್ಲಿ ರಸೂಲುಲ್ಲಾಹ್(ಸ) ಮತ್ತು ಅವರ ಸಹಚರರಿಗೆ ಬಹಳಷ್ಟು ತೊಂದರೆಗಳನ್ನು ಉಂಟುಮಾಡಿದರು, ಆದರೆ ಅವರು ಬದ್ರ್ ಯುದ್ಧದ ನಂತರ ಮುಸಲ್ಮಾನರಾದರು. ಮುಸಲ್ಮಾನರಾಗುವ ಮೊದಲು, ಒಂದು ಬಾರಿ ಕಅ್‌ಬದ ಸಮೀಪದ ದಿಣ್ಣೆಯ ಬಳಿ ಕುಳಿತುಕೊಂಡು ಉಮ್ಮೈರ್ ಬಿನ್ ವಹಬ್ ಮತ್ತು ಸಫ್‌ವಾನ್ ಬಿನ್ ಉಮಯ್ಯ ಬದ್ರ್ ಯುದ್ಧದಲ್ಲಿ ಉಂಟಾದ ಸೋಲು ಮತ್ತು ಖುರೈಶೀ ಮುಖಂಡರ ನಾಶದ ಕುರಿತು ಮಾತನಾಡುತ್ತಿದ್ದರು. ಆ ಸಮಯದಲ್ಲಿ ಸಫ್ವಾನ್ ಮುಸ್ಲಿಂ ಆಗಿರಲಿಲ್ಲ. ಇಬ್ಬರೂ ಬದ್ರ್ ಯುದ್ಧದಲ್ಲಿ ತಮ್ಮ ಸೋಲಿನ ಬಗ್ಗೆ ಮತ್ತು ಆ ಯುದ್ಧದಲ್ಲಿ ಮಡಿದ ತಮ್ಮ ಮಹಾನ್ ನಾಯಕರ ಬಗ್ಗೆ ಮಾತನಾಡುತ್ತಿದ್ದರು. ಸಫ್ವಾನ್ ಹೇಳಿದರು ಅಲ್ಲಾಹನ ಆಣೆ! ಈ ನಾಯಕರ ವಧೆಯ ನಂತರ, ಜೀವನದ ಮೋಜು ಮುಗಿದು ಹೋಗಿದೆ. ಉಮ್ಮೈರ್ ಹೇಳಿದನು: ನಿವು ನಿಜ ಹೇಲುತ್ತಿದ್ದೀರಿ. ಒಬ್ಬ ವ್ಯಕ್ತಿಯ ಸಾಲ ತೀರಿಸಲು ಇರದಿದ್ದರೆ ಮತ್ತು ನನ್ನ ನಂತರ ನನ್ನ ಪತ್ನಿ ಮಕ್ಕಳ ಬಗ್ಗೆ ಚಿಂತೆ ಇರದಿದ್ದರೆ ನಾನು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರನ್ನು ವಧಿಸುತ್ತಿದ್ದೆ. ಏಕೆಂದರೆ ನನಗೆ ಅಲ್ಲಿಗೆ ಹೋಗಲಿಕ್ಕಾಗಿ ಒಂದು ಕಾರಣವೂ ಇದೆ. ಅದೇನೆಂದರೆ, ನನ್ನ ಮಗನು ಅವರ ಬಳಿಯಲ್ಲಿ ಬಂಧಿಯಾಗಿದ್ದಾನೆ. ಇದನ್ನು ಕೇಳುತ್ತಲೇ ಎರಡೂ ಕೆಲಸಗಳ ಹೊಣೆಯನ್ನು ಸಫ್‌ವಾನ್ ಎತ್ತಿಕೊಂಡನು ಮತ್ತು ಹೀಗೆ ಹೇಳಿದನು: ನೀನು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರನ್ನು ವಧಿಸು. (ನಊಧುಬಿಲ್ಲಾಹ್). ಉಮ್ಮೈರ್ ಸಫ್‌ವಾನ್‌ನೊಡನೆ ಹೇಳಿದನು: ನನ್ನ ಮತ್ತು ನಿನ್ನ ನಡುವೆ ನಡೆದ ಮಾತನ್ನು ರಹಸ್ಯವಾಗಿ ಇಡು. ರಹಸ್ಯವಾಗಿ ಇಡುವುದಾಗಿ ಸಫ್‌ವಾನ್ ವಾಗ್ದಾನ ಮಾಡಿದನು. ಉಮ್ಮೈರ್ ತನ್ನ ಖಡ್ಗವನ್ನು ಚೂಪುಗೊಳಿಸಿದನು ಮತ್ತು ಅದನ್ನು ವಿಷದಲ್ಲಿ ಮುಳುಗಿಸಿದನು. ಅನಂತರ ಮಕ್ಕದಿಂದ ಹೊರಟು ಮದೀನಕ್ಕೆ ತಲುಪಿದನು.

ಉಮ್ಮೈರ್ ಮಸ್ಜಿದೆ ನಬವಿಗೆ ತಲುಪಿದಾಗ, ಹಝ್ರ‌ತ್ ಉಮರ್(ರ) ಅಲ್ಲಿ ಇತರ ಕೆಲವು ಮುಸ್ಲಿಮರೊಂದಿಗೆ ಕುಳಿತು ಬದ್ರ್ ಯುದ್ಧದ ಬಗ್ಗೆ ಮಾತನಾಡುತ್ತಿದ್ದರು. ಉಮ್ಮೈರ್ ತನ್ನ ಒಂಟೆಯನ್ನು ಮಸ್ಜಿದ್ ನಬವಿಯ ಬಾಗಿಲಲ್ಲಿ ಕೂರಿಸಿದ ತಕ್ಷಣ, ಹಝ್ರ‌ತ್ ಉಮರ್(ರ) ಉಮ್ಮೈರ್ ಕೈಯಲ್ಲಿ ಕತ್ತಿಯೊಂದಿಗೆ ಬರುತ್ತಿರುವುದನ್ನು ಗಮನಿಸಿದರು. ಇದನ್ನು ನೋಡಿದ ಹಝ್ರ‌ತ್ ಉಮರ್(ರ) ಅವರು ದೇವರ ಶತ್ರು ಉಮ್ಮೈರ್ ಬಿನ್ ವಹಬ್ ಯಾವುದೋ ದುಷ್ಟ ಉದ್ದೇಶದಿಂದ ಇಲ್ಲಿಗೆ ಬಂದಿರಬೇಕು ಎಂದು ಹೇಳಿದರು. ಆಗ ಹಝ್ರ‌ತ್ ಉಮರ್(ರ) ಅವರು ತಕ್ಷಣವೇ ಅಲ್ಲಿಂದ ಎದ್ದು ರಸೂಲುಲಲಾಹ್(ಸ) ಅವರ ಪವಿತ್ರ ಕೋಣೆಯಲ್ಲಿ ರಸೂಲುಲ್ಲಾಹ್(ಸ) ಅವರ ಬಳಿಗೆ ಹೋಗಿ ಹೇಳಿದರು: ಯಾ ರಸೂಲಲ್ಲಾಹ್! ಈ ದೇವರ ಶತ್ರು ಉಮ್ಮೈರ್ ಬಿನ್ ವಹಬ್ ಬರಿ ಕತ್ತಿಯೊಂದಿಗೆ ಬಂದಿದ್ದಾನೆ. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ಆತನನ್ನು ನನ್ನ ಬಳಿಗೆ ಕರೆತನ್ನಿ. ತೊಂದರೆ ಇಲ್ಲ, ಹಝ್ರ‌ತ್ ಉಮರ್(ರ) ನೇರವಾಗಿ ಉಮ್ಮೈರ್ ಬಳಿ ಬಂದು ಕುತ್ತಿಗೆಯಲ್ಲಿದ್ದ ಕತ್ತಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಉಮ್ಮೈರ್ ನನ್ನು ಕರೆದುಕೊಂಡು ಹೋದರು. ಹಝ್ರ‌ತ್ ಉಮರ್(ರ) ಅವರೊಂದಿಗೆ ಅಲ್ಲಿ ನೆರೆದಿದ್ದ ಅನ್ಸಾರಿ ಮುಸಲ್ಮಾನರಿಗೆ ಹಝ್ರ‌ತ್ ಉಮರ್ ಹೇಳಿದರು, "ನನ್ನೊಂದಿಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಬಳಿಗೆ ಬನ್ನಿ, ಮತ್ತು ಅವರ ಸಮೀಪ ಕುಳಿತುಕೊಳ್ಳಿ, ಏಕೆಂದರೆ ನಾನು ಈತನ ಬಗ್ಗೆ ತೃಪ್ತಿ ಹೊಂದಿಲ್ಲ." ಅದರ ನಂತರ, ಹಝ್ರ‌ತ್ ಉಮರ್(ರ) ಆತನನ್ನು ಕರೆದುಕೊಂಡು ರಸೂಲುಲ್ಲಾಹ್(ಸ)ರ ಬಳಿಗೆ ಬಂದರು. ಉಮರ್(ರ) ಅವರು ಕತ್ತಿನಲ್ಲಿದ್ದ ಉಮ್ಮೈರ್‌ನ ಖಡ್ಗವನ್ನು ಗಟ್ಟಿಯಾಗಿ ಹಿಡಿದುಕೊಂಡು ಬರುತ್ತಿರುವುದನ್ನು ಪ್ರವಾದಿಯವರು ಕಂಡಾಗ ಅವರು ಹೇಳಿದರು. ಉಮರ್! ಆತನನ್ನು ಸುಮ್ಮನೆ ಬಿಡು. ಮತ್ತು ಅವರು(ಸ) ಹೇಳಿದರು: ಉಮ್ಮೈರ್ ನನ್ನ ಬಳಿ ಬನ್ನಿ. ಉಮ್ಮೈರ್ ಹತ್ತಿರ ಬಂದು ಜಾಹಿಲಿಯಾದ ಶಿಷ್ಟಾಚಾರದ ಪ್ರಕಾರ **"ಅನ್-ಅಮ್ಮುಅ ಸಬಾಹ್"** ಎಂದು ಹೇಳಿ ನಮಸ್ಕರಿಸಿದನು. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ಉಮ್ಮೈರ್, ಇಸ್ಲಾಂ ಧರ್ಮವು ನಿಮಗಿಂತ ಉತ್ತಮವಾದ ಶುಭಾಶಯವನ್ನು (ಸಲಾಮ್) ನಮಗೆ ನೀಡಿದೆ, ಇದು ಸ್ವರ್ಗದ ಜನರ ಶುಭಾಶಯವಾಗಿದೆ. ನೀವು ಯಾವುದಕ್ಕಾಗಿ ಬಂದಿದ್ದೀರಿ? ಅದಕ್ಕೆ ಉಮ್ಮೈರ್ ಹೇಳಿದನು, ನಿಮ್ಮ ಜನರ ವಶದಲ್ಲಿರುವ ನನ್ನ ಮಗನ ಬಗ್ಗೆ ಮಾತನಾಡಲು ಬಂದಿದ್ದೇನೆ. ಈ ನಿಟ್ಟಿನಲ್ಲಿ ನೀವು ಒಳ್ಳೆಯ ಮತ್ತು ಒಳ್ಳೆಯ ವ್ಯವಹಾರವನ್ನು ಮಾಡಬೇಕು ಎಂಬುದು ನನ್ನ ವಿನಂತಿಯಾಗಿದೆ. ರಸೂಲುಲ್ಲಾಹ್(ಸ) ಅವರು ಆತನ ಬೆತ್ತಲೆ ಕತ್ತಿಯನ್ನು ನೋಡಿ ಹೇಳಿದರು: ಹಾಗಾದರೆ

ಈ ಕತ್ತಿಯ ಅರ್ಥವೇನು? ಅದಕ್ಕೆ ಉಮೈರ್ ಹೇಳಿದನು, ದೇವರು ಈ ಖಡ್ಗವನ್ನು ನಾಶಮಾಡಲಿ. ನೀವು ನಮಗೆ ಯೋಗ್ಯವಾದದ್ದನ್ನು ಬಿಟ್ಟಿದ್ದೀರಾ? ಈ ಖಡ್ಗ ಮೊದಲು ನಮಗೆ ಯಾವ ಬೆಂಬಲ ನೀಡಿದೆ. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು "ನಿಜ ಹೇಳು, ನೀನು ಯಾವ ಉದ್ದೇಶಕ್ಕಾಗಿ ಬಂದಿರುವೆ? ಆತನನ್ನು ನಂಬಲಿಲ್ಲ. ಅದಕ್ಕೆ ಉಮೈರ್ ಹೇಳಿದನು ನಿಜವಾಗಿಯೂ ನಾನು ನನ್ನ ಕೈದಿಯ ಬಗ್ಗೆ ನಿಮ್ಮೊಂದಿಗೆ ಮಾತನಾಡುವ ಉದ್ದೇಶದಿಂದ ಬಂದಿರುವೆನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿನ್ನ ಉದ್ದೇಶ ಅದಲ್ಲ. ಒಂದು ದಿನ ನೀನು ಮತ್ತು ಸಫ್ವಾನ್ ಬಿನ್ ಉಮಯ್ಯ ಕಅ್‌ಬದ ದಿಣ್ಣೆಯ ಬಳಿ ಬದ್ರಿನಲ್ಲಿ ಕೊಲ್ಲಲ್ಪಟ್ಟವರ ಬಗ್ಗೆ ಮಾತನಾಡುತ್ತಿದ್ದೀರಿ. ಆ ಸಮಯದಲ್ಲಿ ನೀನು ಸಫ್ವಾನ್‌ಗೆ ಹೇಳಿದ್ದು ನನಗೆ ಸಾಲವಿಲ್ಲದಿದ್ದರೆ ಮತ್ತು ನನ್ನ ಹೆಂಡತಿ ಮಕ್ಕಳ ಬಗ್ಗೆ ಚಿಂತಿಸದಿದ್ದರೆ ನಾನು ಹೋಗಿ ಮುಹಮ್ಮದ್(ಸ) ಅವರನ್ನು ವಧಿಸುತ್ತಿದ್ದೆ ಎಂದು. ನನ್ನನ್ನು ವಧಿಸುವ ಷರತ್ತಿನೊಂದಿಗೆ ನಿಮ್ಮ ಸಾಲವನ್ನು ಮತ್ತು ಹೆಂಡತಿ ಮಕ್ಕಳನ್ನು ತೀರಿಸುವ ಜವಾಬ್ದಾರಿಯನ್ನು ಸಫ್ವಾನ್ ವಹಿಸಿಕೊಂಡಿದ್ದನು. ಈ ಎಲ್ಲಾ ವಿಷಯಗಳನ್ನು ಅಲ್ಲಾಹನು ರಸೂಲುಲ್ಲಾಹ್(ಸ) ಅವರಿಗೆ ತಿಳಿಸಿದ್ದನು. ಹೀಗೆ ಹೇಳಿಕೊಂಡು ಹಝ್ರತ್ ಪೈಗಂಬರ್(ಸ) ಅವರ ನಡುವೆ ನಡೆದ ಎಲ್ಲ ಮಾತುಕತೆಯನ್ನು ವಿವರಿಸಿದರು. ಇದನ್ನೆಲ್ಲ ಆಲಿಸಿ ಉಮೈರ್ ಆಶ್ಚರ್ಯಗೊಂಡನು ಮತ್ತು ಕೂಡಲೇ ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡನು. ಉಮೈರ್ ಹೇಳಿದನು: ನಾವಿಬ್ಬರು ಮಾತುಕತೆ ನಡೆಸುವಾಗ ಅಲ್ಲಿ ಮೂರನೆಯವನಾಗಿ ಯಾರೂ ಇರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ)ರಿಗೆ ಈ ಸಂಗತಿಯನ್ನು ಅಲ್ಲಾಹನಲ್ಲದೇ ಬೇರೆ ಯಾರೂ ಹೇಳಿರಲು ಸಾಧ್ಯವಿಲ್ಲ.

ಆದ್ದರಿಂದ ನಮಗೆ ಇಸ್ಲಾಂ ಧರ್ಮದ ಕಡೆಗೆ ಮಾರ್ಗದರ್ಶನ ನೀಡಿದ ಅಲ್ಲಾಹನಿಗೆ ಎಲ್ಲಾ ಸ್ತುತಿಗಳು ಸಲ್ಲುತ್ತದೆ ಮತ್ತು ಈ ಮಾರ್ಗವನ್ನು ಅನುಸರಿಸಲು ನನಗೆ ಅನುವು ಮಾಡಿಕೊಟ್ಟಿತು. ಬಳಿಕ ಉಮೈರ್ ಕಲಿಮ ಶಹಾದತ್ ಅನ್ನು ಪಠಿಸಿದರು. ತದನಂತರ ರಸೂಲುಲ್ಲಾಹ್(ಸ)ರವರು ಸಹಾಬಿಗಳಿಗೆ ಹೇಳಿದರು: ನಿಮ್ಮ ಸಹೋದರನಿಗೆ ಧಾರ್ಮಿಕ ಬೋಧನೆಗಳನ್ನು ಕಲಿಸಿ ಮತ್ತು ಪವಿತ್ರ ಖುರ್‌ಆನ್ ಕಲಿಸಿ ಮತ್ತು ಅವರ ಕೈದಿಯನ್ನು ಬಿಡುಗಡೆ ಮಾಡಿ. ಸಹಚರರು ತಕ್ಷಣ ಆದೇಶವನ್ನು ಪಾಲಿಸಿದರು.

ಮತ್ತೆ ಹಝ್ರತ್ ಉಮೈರ್ ರಸೂಲುಲ್ಲಾಹ್(ಸ) ಅವರನ್ನು ಕೇಳಿದರು, ಯಾ ರಸೂಲಲ್ಲಾಹ್! ನಾನು ಯಾವಾಗಲೂ ಅಲ್ಲಾಹನ ಬೆಳಕನ್ನು ನಂದಿಸಲು ಪ್ರಯತ್ನಿಸುತ್ತಿದ್ದೆ ಮತ್ತು ಅಲ್ಲಾನ ಧರ್ಮವನ್ನು ಸ್ವೀಕರಿಸಿದವರಿಗೆ ನಾನು ತುಂಬಾ ನೋವುಂಟುಮಾಡುತ್ತಿದ್ದೆ. ಹಾಗಾಗಿ ಈಗ ನೀವು ನನಗೆ ಮಕ್ಕಾಕ್ಕೆ ಹೋಗಲು ಅವಕಾಶ ನೀಡಬೇಕೆಂದು ನಾನು ಬಯಸುತ್ತೇನೆ, ಇದರಿಂದ ನಾನು ಮಕ್ಕಾದ ಜನರನ್ನು ಅಲ್ಲಾಹನ ಬಳಿಗೆ ಕರೆದು ಇಸ್ಲಾಮಿಗೆ ಆಹ್ವಾನಿಸುತ್ತೇನೆ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡುವ ಸಾಧ್ಯತೆಯಿದೆ, ಇಲ್ಲದಿದ್ದರೆ ನಾನು ಇಸ್ಲಾಂನಿಂದ ನಿಮ್ಮ ಸಹಚರರಿಗೆ ನೋವುಂಟು ಮಾಡಿದ ರೀತಿಯಲ್ಲಿಯೇ ಅವರ ವಿಗ್ರಹಾರಾಧನೆಯಿಂದ ಅವರಿಗೆ ನೋವನ್ನುಂಟುಮಾಡುತ್ತೇನೆ. ರಸೂಲುಲ್ಲಾಹ್(ಸ) ಅವರು ಮಕ್ಕಾಕ್ಕೆ ಹೋಗಲು ಅನುಮತಿ ನೀಡಿದರು. ನೋಯಿಸಲು ಅಲ್ಲ ಬೋಧಿಸಲು. ಆದ್ದರಿಂದ ಅವರು ಮಕ್ಕಾಕ್ಕೆ ಹಿಂದಿರುಗಿದರು ಮತ್ತು ಅವರ ಪುತ್ರ ವಹಬ್ ಬಿನ್ ಉಮೈರ್ ಕೂಡ ಮುಸಲ್ಮಾನರಾದರು.

ಮತ್ತೊಂದೆಡೆ ಮಕ್ಕದಲ್ಲಿ ಸಫ್ವಾನ್ ಎಲ್ಲರೊಡನೆ ಹೀಗೆ ಹೇಳುತ್ತಿದ್ದನು: ನಾನು ಬೇಗನೇ ನಿಮಗೆ ಎಂತಹ ಸುವಾರ್ತೆಯನ್ನು ಹೇಳುವೆನು ಎಂದರೆ, ಅದರಿಂದ ನೀವು ಬದ್ರಿನಿಂದ ಉಂಟಾದ ದುಃಖವನ್ನು ಮರೆತು ಬಿಡುವಿರಿ. ಆಗಮಿಸುವ ಪ್ರತಿಯೊಬ್ಬರೊಡನೆ ಉಮೈರಿನ ಕಾರ್ಯಾಚರಣೆಯ ಬಗ್ಗೆ ಉಮೈರ್ ಕೇಳುತ್ತಿದ್ದನು. ಕೊನೆಗೆ ಒಂದು ದಿನ ಉಮೈರ್ ಇಸ್ಲಾಂ ಸ್ವೀಕಾರ ಮಾಡಿದ ಸುದ್ದಿ ಲಭಿಸಿತು. ಸಫ್ವಾನ್ ಅವನೊಂದಿಗೆ ಎಂದಿಗೂ ಮಾತನಾಡುವುದಿಲ್ಲ ಮತ್ತು ಅವನಿಗೆ ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ ಎಂದು ಪ್ರಮಾಣ ಮಾಡಿದನು. ಅದರ ನಂತರ, ಉಮೈರ್ ಮಕ್ಕಾ ತಲುಪಿದಾಗ, ಈಗ ಅವನು ಮುಸ್ಲಿಂ ಆಗಿದ್ದನು, ಅವನು ಮೊದಲು ಸಫ್ವಾನ್ ಮನೆಗೆ ಹೋಗಲಿಲ್ಲ, ಬದಲಿಗೆ ನೇರವಾಗಿ ತನ್ನ ಸ್ವಂತ ಮನೆಗೆ ಹೋದನು, ಅಲ್ಲಿ ಅವನು ತನ್ನ ಕುಟುಂಬದ ಮುಂದೆ ತನ್ನ ಇಸ್ಲಾಂ ಧರ್ಮವನ್ನು ಘೋಷಿಸಿದನು ಮತ್ತು ಅವರನ್ನು ಮುಸ್ಲಿಮರಾಗಲು ಆಹ್ವಾನಿಸಿದನು. ಈ ಬಗ್ಗೆ ಸಫ್ವಾನ್‌ಗೆ ಮಾಹಿತಿ ನೀಡಿದಾಗ, ಅವನು ನನ್ನ ಬಳಿಗೆ ಬರದೆ ಅವರ ಮನೆಗೆ ಏಕೆ ಹೋಗಿದ್ದಾನೆಂದು ನನಗೆ ಈಗಾಗಲೇ ಅರ್ಥವಾಯಿತು. ಅವನು ಅಧರ್ಮಿಯೂ ದಾರಿತಪ್ಪಿಯೂ ಆಗಿಬಿಟ್ಟಿದ್ದಾನೆ. ನಾನು ಅವನೊಂದಿಗೆ ಮತ್ತೆ ಮಾತನಾಡುವುದಿಲ್ಲ ಮತ್ತು ಅವನಾಗಲಿ ಅವನ ಕುಟುಂಬಕ್ಕಾಗಲಿ ನನ್ನಿಂದ ಎಂದಿಗೂ ಪ್ರಯೋಜನವಾಗುವುದಿಲ್ಲ.

ಬಹುದೇವತಾವಾದಿಗಳು ತಮ್ಮ ಬಹುದೇವತಾವಾದವನ್ನು ಧರ್ಮವೆಂದು ಪರಿಗಣಿಸಿದ್ದಾರೆ ಮತ್ತು ಏಕ ದೇವರ ಆರಾಧನೆಯನ್ನು ದಾರಿತಪ್ಪಿ ಎಂದು ಪರಿಗಣಿಸಿದ್ದಾರೆ. ಇಂದಿಗೂ ಇದೇ ಪರಿಸ್ಥಿತಿ ಇದೆ.

ತದನಂತರ, ಉಮೈರ್ ಸಫ್ವಾನ್ ಬಿನ್ ಉಮಯ್ಯ ಅವರ ಬಳಿಗೆ ಬಂದು ಅವರನ್ನು ಕರೆದು ಹೀಗೆ ಹೇಳಿದರು: ನೀವು ನಮ್ಮ ಮುಖ್ಯಸ್ಥರಲ್ಲಿ ಒಬ್ಬರಾಗಿದ್ದೀರಿ. ನಾವು ಕಲ್ಲುಗಳನ್ನು ಪೂಜಿಸುತ್ತಿದ್ದೆವು ಮತ್ತು ಅವುಗಳಿಗೆ ತ್ಯಾಗಗಳನ್ನು ಮಾಡುತ್ತಿದ್ದೆವು ಎಂದು ನಿಮಗೆ ತಿಳಿದಿದೆ. ಇದು ಧರ್ಮವೇ? ಸರ್ವಶಕ್ತನಾದ ಅಲ್ಲಾಹನನ್ನು ಹೊರತುಪಡಿಸಿ ಬೇರೆ ದೇವರು ಇಲ್ಲ ಮತ್ತು ಮುಹಮ್ಮದ್ (ಸ) ಅವರು ಅಲ್ಲಾಹನ ಸಂದೇಶವಾಹಕರು ಎಂದು ನಾನು ಸಾಕ್ಷಿ ಹೇಳುತ್ತೇನೆ, ಆದರೆ ಸಫ್ವಾನ್ ಉಮೈರ್ ಅವರ ಮಾತಿಗೆ ಉತ್ತರಿಸಲಿಲ್ಲ ಮತ್ತು ಅವನ ಕಡೆಗೆ ಗಮನ ನೀಡಲಿಲ್ಲ.

(ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–268–270, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2002)

ಈ ಘಟನೆಗೆ ಸಂಬಂಧಿಸಿದಂತೆ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಸೀರತ್ ಖಾತುಮುನ್ನಬೀಈನ್(ಸ) ನಲ್ಲಿ ಬರೆದಿದ್ದಾರೆ, ಮಕ್ಕಾದ ಅವಿಶ್ವಾಸಿಗಳು ಕೇವಲ ಬಾಹ್ಯ ಶಕ್ತಿ ಮತ್ತು ದುರಹಂಕಾರದ ಆಧಾರದ ಮೇಲೆ ಹೋರಾಡುತ್ತಿದ್ದರು, ಈಗ ರಹಸ್ಯ ಮತ್ತು ಪರದೆಯ ಪಿತೂರಿಗಳತ್ತ ಒಲವು ತೋರುತ್ತಿದ್ದಾರೆ. ಆದ್ದರಿಂದ, ಬದ್ರ್ ಕದನದ ಕೆಲವೇ ದಿನಗಳಲ್ಲಿ ಸಂಭವಿಸಿದ ಈ ಐತಿಹಾಸಿಕ ಘಟನೆಯು ಈ ಅಪಾಯದ ಸ್ಪಷ್ಟ ಉದಾಹರಣೆಯಾಗಿದೆ. ಬದ್ರ್ ಯುದ್ಧದ ಕೆಲವು ದಿನಗಳ ನಂತರ ಉಮೈರ್ ಬಿನ್ ವಹಬ್ ಮತ್ತು ಸಫ್ವಾನ್ ಬಿನ್ ಉಮಯ್ಯ ಬಿನ್ ಖಲಫ್ ಅವರು ಖುರೈಷಿಗಳ ಪ್ರಮುಖ ನಾಯಕರಲ್ಲಿದ್ದರು ಅವರಿಬ್ಬರು ಕಾಅ್‌ಬದ ಅಂಗಳದಲ್ಲಿ ಕುಳಿತು ಬದ್ರ್ ಯುದ್ಧದಲ್ಲಿ ವಧಿಸಲ್ಪಟ್ಟ ತಮ್ಮ ನಾಯಕರ ಬಗ್ಗೆ ಶೋಕಿಸುತ್ತಿದ್ದರು. ಈಗಾಗಲೇ ಉಲ್ಲೇಖಿಸಲಾದ ವಿಷಯಗಳನ್ನು ನೀವು(ರ) ಇಲ್ಲಿ ಬರೆದಿದ್ದಾರೆ, ಅವರು ಈ ವಿಷಯಗಳನ್ನು ಹೇಳುತ್ತಿದ್ದರು. ಈ ನಾಯಕರ ವಧೆಯ ನಂತರ, ಜೀವನದ ಮೋಜು ಮುಗಿದು ಹೋಗಿದೆ. ಉಮೈರ್ ಹೇಳಿದನು: ನಿವು ನಿಜ ಹೇಳುತ್ತಿದ್ದೀರಿ. ಒಬ್ಬ ವ್ಯಕ್ತಿಯ ಸಾಲ ತೀರಿಸಲು ಇರದಿದ್ದರೆ ಮತ್ತು ನನ್ನ ನಂತರ ನನ್ನ ಪತ್ನಿ ಮಕ್ಕಳ ಬಗ್ಗೆ ಚಿಂತೆ ಇರದಿದ್ದರೆ ನಾನು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರನ್ನು ವಧಿಸುತ್ತಿದ್ದೆ. ಏಕೆಂದರೆ ನನಗೆ ಅಲ್ಲಿಗೆ ಹೋಗಲಿಕ್ಕಾಗಿ ಒಂದು ಕಾರಣವೂ ಇದೆ. ಅದೇನೆಂದರೆ, ನನ್ನ ಮಗನು ಅವರ ಬಳಿಯಲ್ಲಿ ಬಂಧಿಯಾಗಿದ್ದಾನೆ. ಇದನ್ನು ಕೇಳುತ್ತಲೇ ಎರಡೂ ಕೆಲಸಗಳ ಹೊಣೆಯನ್ನು ಸಫ್ವಾನ್ ಎತ್ತಿಕೊಂಡನು ಮತ್ತು ಹೀಗೆ ಹೇಳಿದನು: ನೀನು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರನ್ನು ವಧಿಸು. (ನಊಝುಬಿಲ್ಲಾಹ್). ಉಮೈರ್ ಸಫ್ವಾನ್‌ನೊಡನೆ ಹೇಳಿದನು: ನನ್ನ ಮತ್ತು ನಿನ್ನ ನಡುವೆ ನಡೆದ ಮಾತನ್ನು ರಹಸ್ಯವಾಗಿ ಇಡು. ರಹಸ್ಯವಾಗಿ ಇಡುವುದಾಗಿ ಸಫ್ವಾನ್ ವಾಗ್ದಾನ ಮಾಡಿದನು. ಉಮೈರ್ ತನ್ನ ಖಡ್ಗವನ್ನು ಚೂಪುಗೊಳಿಸಿದನು ಮತ್ತು ಅದನ್ನು ವಿಷದಲ್ಲಿ ಮುಳುಗಿಸಿದನು. ಅನಂತರ ಮಕ್ಕದಿಂದ ಹೊರಟು ಮದೀನಕ್ಕೆ ತಲುಪಿದಾಗ. ಈ ವಿಷಯಗಳಲ್ಲಿ ಬಹಳ ಬುದ್ಧಿವಂತರಾದ ಹಝ್ರತ್ ಉಮರ್(ರ) ಅವರನ್ನು ಕಂಡು ಭಯಪಟ್ಟರು ಮತ್ತು ತಕ್ಷಣವೇ ರಸೂಲುಲ್ಲಾಹ್(ಸ)ರ ಬಳಿಗೆ ಹೋಗಿ ಉಮೈರ್ ಬಂದಿದ್ದಾರೆ ಮತ್ತು ನನಗೆ ಅವರ ಬಗ್ಗೆ ತೃಪ್ತಿ ಇಲ್ಲ ಎಂದು ಹೇಳಿದರು. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು, ಅವನನ್ನು ನನ್ನ ಬಳಿಗೆ ಕರೆತನ್ನಿ. ಹಝ್ರತ್ ಉಮರ್(ರ) ನೇರವಾಗಿ ಉಮೈರ್ ಬಳಿ ಬಂದು ಕುತ್ತಿಗೆಯಲ್ಲಿದ್ದ ಕತ್ತಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಉಮೈರ್ ನನ್ನು ಕರೆದುಕೊಂಡು ಹೋದರು. ಹಝ್ರತ್ ಉಮರ್(ರ) ಅವರೊಂದಿಗೆ ಅಲ್ಲಿ ನೆರೆದಿದ್ದ ಸಹಾಬಗಳಿಗೆ ಹಝ್ರತ್ ಉಮರ್ ಹೀಗೆ ಹೇಳಿದರು, "ನನ್ನೊಂದಿಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಬಳಿಗೆ ಬನ್ನಿ, ಮತ್ತು ಅವರ ಸಮೀಪ ಕುಳಿತುಕೊಳ್ಳಿ, ಏಕೆಂದರೆ ನಾನು ಈತನ ಬಗ್ಗೆ ತೃಪ್ತಿ ಹೊಂದಿಲ್ಲ." ತದನಂತರ, ಹಝ್ರತ್ ಉಮರ್(ರ) ಆತನನ್ನು ಕರೆದುಕೊಂಡು ರಸೂಲುಲ್ಲಾಹ್(ಸ)ರ ಬಳಿಗೆ ಬಂದರು. ರಸೂಲುಲ್ಲಾಹ್(ಸ) ಅವರು ಬಹಳ ಮೃದುವಾಗಿ ಹೇಳಿದರು: ಉಮೈರ್ ನಿಮ್ ಬರುವಿಕೆಯ ಉದ್ದೇಶವೇನು? ಅದಕ್ಕೆ ಉಮೈರ್ ಹೇಳಿದರು, ನಿಮ್ಮ ಜನರ ವಶದಲ್ಲಿರುವ ನನ್ನ ಮಗನ ಬಗ್ಗೆ ಮಾತನಾಡಲು ಬಂದಿರುವೆನು. ರಸೂಲುಲ್ಲಾಹ್(ಸ) ಅವರು ಆತನ ಬೆತ್ತಲೆ ಕತ್ತಿಯನ್ನು ನೋಡಿ ಹೇಳಿದರು: ಹಾಗಾದರೆ ಈ ಕತ್ತಿಯ ಅರ್ಥವೇನು? ಅದಕ್ಕೆ ಉಮೈರ್ ಹೇಳಿದನು, ದೇವರು ಈ ಖಡ್ಗವನ್ನು ನಾಶಮಾಡಲಿ. ನೀವು ನಮಗೆ ಯೋಗ್ಯವಾದದ್ದನ್ನು ಬಿಟ್ಟಿದ್ದೀರಾ? ಈ ಖಡ್ಗ ಮೊದಲು ನಮಗೆ ಯಾವ ಬೆಂಬಲ ನೀಡಿದೆ? ಎಂದು ಬಹಳ ಬುದ್ಧಿವಂತಿಕೆಯಿಂದ ಮಾತನಾಡುತ್ತಿದ್ದನು. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು "ನಿಜ ಹೇಳು, ನೀನು ಯಾವ ಉದ್ದೇಶಕ್ಕಾಗಿ ಬಂದಿರುವೆ? ಆತನನ್ನು ನಂಬಲಿಲ್ಲ. ಅದಕ್ಕೆ ಉಮೈರ್ ಹೇಳಿದನು ನಿಜವಾಗಿಯೂ ನಾನು ನನ್ನ ಕೈದಿಯ ಬಗ್ಗೆ ನಿಮ್ಮೊಂದಿಗೆ ಮಾತನಾಡುವ ಉದ್ದೇಶದಿಂದ ಬಂದಿರುವೆನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿನ್ನ ಉದ್ದೇಶ ಅದಲ್ಲ. ಒಂದು ದಿನ ನೀನು ಮತ್ತು ಸಫ್ವಾನ್ ಬಿನ್ ಉಮಯ್ಯ ಕಅ್‌ಬದ ದಿಣ್ಣೆಯ ಬಳಿ ಬದ್ರಿನಲ್ಲಿ ಕೊಲ್ಲಲ್ಪಟ್ಟವರ ಬಗ್ಗೆ ಮಾತನಾಡುತ್ತಿದ್ದೀರಿ. ಆ ಸಮಯದಲ್ಲಿ ನೀನು ಸಫ್ವಾನ್‌ಗೆ ಹೇಳಿದ್ದು ನನಗೆ ಸಾಲವಿಲ್ಲದಿದ್ದರೆ ಮತ್ತು ನನ್ನ ಹೆಂಡತಿ ಮಕ್ಕಳ ಬಗ್ಗೆ ಚಿಂತಿಸದಿದ್ದರೆ ನಾನು ಹೋಗಿ ಮುಹಮ್ಮದ್(ಸ) ಅವರನ್ನು ವಧಿಸುತ್ತಿದ್ದೆ ಎಂದು. ನನ್ನನ್ನು ವಧಿಸುವ ಷರತ್ತಿನೊಂದಿಗೆ ನಿಮ್ಮ ಸಾಲವನ್ನು ಮತ್ತು ಹೆಂಡತಿ ಮಕ್ಕಳನ್ನು ತೀರಿಸುವ ಜವಾಬ್ದಾರಿಯನ್ನು ಸಫ್ವಾನ್ ವಹಿಸಿಕೊಂಡಿದ್ದನು. ಈ ಎಲ್ಲಾ ವಿಷಯಗಳನ್ನು ಅಲ್ಲಾಹನು ರಸೂಲುಲ್ಲಾಹ್(ಸ) ಅವರಿಗೆ ತಿಳಿಸಿದ್ದನು. ಹೀಗೆ ಹೇಳಿಕೊಂಡು ಹಝ್ರತ್ ಪೈಗಂಬರ್(ಸ) ಅವರ ನಡುವೆ ನಡೆದ ಎಲ್ಲ ಮಾತುಕತೆಯನ್ನು ವಿವರಿಸಿದರು. ಇದನ್ನೆಲ್ಲ ಆಲಿಸಿ ಉಮೈರ್ ಆಶ್ಚರ್ಯಗೊಂಡನು ಮತ್ತು ಕೂಡಲೇ ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡನು. ಉಮೈರ್ ಹೇಳಿದನು: ನಾವಿಬ್ಬರು ಮಾತುಕತೆ ನಡೆಸುವಾಗ ಅಲ್ಲಿ ಮೂರನೆಯವನಾಗಿ ಯಾರೂ ಇರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ)ರಿಗೆ ಈ ಸಂಗತಿಯನ್ನು ಅಲ್ಲಾಹನಲ್ಲದೇ ಬೇರೆ ಯಾರೂ ಹೇಳಿರಲು ಸಾಧ್ಯವಿಲ್ಲ.

ರಸೂಲುಲ್ಲಾಹ್(ಸ) ಅವರು ಉಮೈರ್ ಅವರ ಇಸ್ಲಾಂನಿಂದ ಸಂತಸಗೊಂಡರು ಮತ್ತು ಸಹಾಬಿಗಳಿಗೆ ಹೇಳಿದರು. ಈಗ ಇವರು ನಿಮ್ಮ ಸಹೋದರ, ಅವರಿಗೆ ಇಸ್ಲಾಂ ಧರ್ಮದ ಬೋಧನೆಗಳನ್ನು ತಿಳಿಸಿ ಮತ್ತು ಅವನ ಕೈದಿಯನ್ನು ಬಿಡುಗಡೆ ಮಾಡಿ. ಉಮೈರ್ ಬಿನ್ ವಹಬ್ ಮುಸ್ಲಿಂ ಆದರು ಮತ್ತು ಶೀಘ್ರದಲ್ಲೇ ಅವರು ನಂಬಿಕೆ ಮತ್ತು ಪ್ರಾಮಾಣಿಕತೆಯಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದರು ಮತ್ತು ಅಂತಿಮವಾಗಿ ಸದಾಚಾರದ ಬೆಳಕಿನಲ್ಲಿ ಆಕರ್ಷಿತರಾದರು, ಅವರು ನನಗೆ ಮಕ್ಕಾಗೆ ಹೋಗಲು ಮತ್ತು ಅಲ್ಲಿನ ಜನರಿಗೆ ತಬ್ಲೀಗ್ ಮಾಡಲು ಅನುಮತಿ ನೀಡುವಂತೆ ರಸೂಲುಲ್ಲಾಹ್(ಸ) ಅವರನ್ನು ಬೇಡಿಕೊಂಡರು. ಅದಕ್ಕೆ ರಸೂಲುಲ್ಲಾಹ್(ಸ) ಅವರು ಅನುಮತಿ ನೀಡಿದರು ಮತ್ತು ಉಮೈರ್ ಮಕ್ಕಾಗೆ ತಲುಪಿದರು ಮತ್ತು ಅವರ ಉತ್ಸಾಹಭರಿತ ತಬ್ಲೀಗ್‌ನಿಂದ

ಅನೇಕ ಜನರನ್ನು ರಹಸ್ಯವಾಗಿ ಇಸ್ಲಾಂಗೆ ಸೇರಿಸಿದರು. ಹಗಲು ರಾತ್ರಿ ರಸೂಲುಲ್ಲಾಹ್(ಸ) ಅವರ ವಧೆಯ ಸುದ್ದಿಯನ್ನು ಆಲಿಸಲು ಕಾತುರದಿಂದ ಕಾಯುತ್ತಿದ್ದ ಮತ್ತು ಖುರೈಷರಿಗೆ ನೀವು ಈಗ ಒಂದು ಸಿಹಿಸುದ್ದಿಯನ್ನು ಆಲಿಸಲು ಸಿದ್ಧರಾಗಿರಿ ಎಂದು ಹೇಳುತ್ತಿದ್ದ ಸಫ್ವಾನ್, ಈ ದೃಶ್ಯವನ್ನು ನೋಡಿದ ನಂತರ ದಿಗ್ಭ್ರಮೆಗೊಂಡನು. ( ಸೀರತ್ ಖಾತಮನ್ನಬೀಈನ್, ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಪುಟ 374 ರಿಂದ 376 ರವರೆಗೆ)

ಬದ್ರ್ ಯುದ್ಧದ ನಂತರ ಕೆಲವು ಜನರು ಮುಸ್ಲಿಮರಾದರು. ಆದರೆ ಅವರು ಕಪಟತೆಯನ್ನು ಹೊಂದಿದ್ದರು. ಅಂಥವರಲ್ಲಿ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್ ಕೂಡ ಇದ್ದನು.

ಅಲ್ಲಾಮಾ ಇಬ್ನ್ ಕಸೀರ್ ಅವರು ಸುರಾ ಬಕರಹ್‌ದ ಆಯತ್ 9, 10 ರ ವ್ಯಾಖ್ಯಾನದಲ್ಲಿ ಬರೆಯುತ್ತಾರೆ: ಬದ್ರ್ ಯುದ್ಧ ಸಂಭವಿಸಿದಾಗ ಮತ್ತು ಸರ್ವಶಕ್ತನಾದ ಅಲ್ಲಾಹನು ತನ್ನ ಕಲಿಮವನ್ನು ಮೇಲುಗೈ ಸಾಧಿಸಿದಾಗ ಮತ್ತು ಇಸ್ಲಾಂ ಧರ್ಮ ಮತ್ತು ಇಸ್ಲಾಂ ಧರ್ಮದ ಜನರನ್ನು ಗೌರವಿಸಿದಾಗ ಮದೀನಾದ ಓವಜ಼ಿ ಸರದಾರ ಹಾಗೂ ಬನೂ ಖಝ್‌ರಜ್ ಗೋತ್ರದ ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಆತನು ಜಾಹಿಲಿಯ ಕಾಲದಲ್ಲಿ ಇವೆರಡೂ ಗೋತ್ರಗಳು ಅಂದರೆ ಔಸ್ ಹಾಗೂ ಖಝ್ರಜ್ ಗೋತ್ರಗಳ ಮುಖ್ಯಸ್ಥನಾಗಿದ್ದನು. ಆ ಜನರು ಅವನನ್ನು ಆಳಲು ನಿರ್ಧರಿಸಿದ್ದರು. ಅಂದರೆ ಅವರು ಅಬ್ದುಲ್ಲಾ ಬಿನ್ ಅಬಿಯನ್ನು ತಮ್ಮ ಮುಖ್ಯಸ್ಥರನ್ನಾಗಿ ಮಾಡುತ್ತಿದ್ದರು. ಒಂದು ವರದಿಯ ಒರಕಾರ ಅವನ ಜನರು ಅವನಿಗೆ ಪಟ್ಟಾಭಿಷೇಕ ಮಾಡಿ ರಾಜನನ್ನಾಗಿ ಮಾಡಲು ತಯಾರಿಯಲ್ಲಿ ನಿರತರಾಗಿದ್ದರು ಎಂದು ವರದಿಯಾಗಿದೆ. ಅಷ್ಟರಲ್ಲಿ ಒಳ್ಳೆಯದಾಯಿತು ಅಂದರೆ ಇಸ್ಲಾಮಿನ ಸಂದೇಶ ತಲುಪಿತು ಮತ್ತು ಜನರು ಇಸ್ಲಾಮನ್ನು ಸ್ವೀಕರಿಸಿದರು ಮತ್ತು ಅದನ್ನು ಮರೆತುಬಿಟ್ಟರು. ಈ ಕಾರಣಕ್ಕಾಗಿ, ಇಸ್ಲಾಂ ಮತ್ತು ಇಸ್ಲಾಂ ಧರ್ಮದ ಜನರು ಅವನ ಹೃದಯದಲ್ಲಿ ಚುಚ್ಚುವಂತಾಯಿತು. ಬದ್ರ್ ಘಟನೆ ಸಂಭವಿಸಿದಾಗ, ಈ ವಿಷಯವು ಈಗ ಪ್ರಬಲವಾಗುತ್ತಿದೆ ಎಂದು ಹೇಳತೊಡಗಿದನು. ಮೊದಮೊದಲು ಜನರು ಬಹಳ ಕಡಿಮೆ ಪ್ರಮಾಣದಲ್ಲಿದ್ದಾರೆ ಎಂದು ಯೋಚಿಸಿದನು ಆದರೆ ಬದ್ರ್ ಯುದ್ಧದಲ್ಲಿ ವಿಜಯಶಾಲಿಯಾದಾಗ ಅವನಿಗೆ ಚಿಂತೆಯಾಯಿತು. ಆದ್ದರಿಂದ ಆತನು ಮೇಲ್ನೋಟಕ್ಕೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿಕೊಂಡನು ಹೀಗೆ ಆತನನ್ನು ಜಹಿಂಬಾಲಿಸಿ ಆತನ ಅನುಯಾಯಿಗಳ ಒಂದು ಗುಂಪು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿಕೊಂಡರು ಮತ್ತು ಕೆಲವು ಗ್ರಂಥಸ್ಥರು ಸಹ ಅವನೊಂದಿಗೆ ಸೇರಿಕೊಂಡರು. (ತಫ್ಸೀರ್ ಇಬ್ನೆ ಕಸೀರ್, ಸಂಪುಟ–1, ಪುಟ–87, ದಾರುಲ್ ಕುತುಬ್ ಇಲ್‌ಮಿ ಬೈರೂತ್ 1998) (ಸಬ್ಲುಲ್ ಹುದಾ ವರ್‌ಶ್ಶಾದ್, ಸಂಪುಟ–3, ಪುಟ–418, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಈ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಈ ರೀತಿ ಬರೆದಿದ್ದಾರೆ: "ಇಲ್ಲಿಯವರೆಗೆ, ಮದೀನಾದಲ್ಲಿ ಔಸ್ ಮತ್ತು ಖಝ್ರಜ್ ಗೋತ್ರಗಳ ಅನೇಕ ಜನರು ಬಹುದೇವತಾರಾಧನೆಗೆ ಬದ್ಧರಾಗಿದ್ದರು. ಬದ್ರ್ ವಿಜಯವು ಈ ಜನರಲ್ಲಿ ಒಂದು ಚಲನೆಯನ್ನು ಸೃಷ್ಟಿಸಿತು ಮತ್ತು ರಸೂಲುಲ್ಲಾಹ್ (ಸ) ಅವರ ಈ ಮಹಾನ್ ಮತ್ತು ಅಸಾಧಾರಣ ವಿಜಯವನ್ನು ನೋಡಿದ ನಂತರ ಮತ್ತು ನಂತರ ಮದೀನಾದಿಂದ ವಿಗ್ರಹಾರಾಧನೆಯ ಅಂಶಗಳನ್ನು ನೋಡಿದ ನಂತರ ಅವರಲ್ಲಿ ಅನೇಕರು ಇಸ್ಲಾಮಿನ ಸತ್ಯತೆಯನ್ನು ಮನಗಂಡರು. ತದನಂತರ ಮದೀನದಿಂದ ಬಹುದೇವತಾರಾಧನೆಯು ಬಹಳ ಬೇಗ ಕಡಿಮೆಯಾಗಲು ತೊಡಗಿತು. ಆದರೆ ಇಸ್ಲಾಮಿನ ಈ ವಿಜಯವು ದುರುದ್ದೇಶ ಮತ್ತು ಅಸೂಯೆಯ ಕಿಡಿಯನ್ನು ಹೊತ್ತಿಸಿದ ಕೆಲವು ಜನರಿದ್ದರು ಮತ್ತು ಅವರು ಇಸ್ಲಾಂ ಧರ್ಮವನ್ನು ತಮ್ಮ ಹಿತಾಸಕ್ತಿಗೆ ವಿರುದ್ಧವೆಂದು ಪರಿಗಣಿಸಿದ್ದರು ಆದರೆ ಅವರು ಬಾಹ್ಯವಾಗಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿಕೊಂಡಿದ್ದರು ಆದರೆ ಒಳೊಳಗೆಯೇ ಅದನ್ನು ನಶಿಸಿಹಾಕಲು ಕಪಟವಿಶ್ವಾಸಿಗಳ ಗುಂಪಿಗೆ ಸೇರಿಕೊಂಡಿದ್ದರು. ಈ ಕೊನೆಯದಾಗಿ ಉಲ್ಲೇಖಿಸಲಾದ ಜನರಲ್ಲಿ ಪ್ರಮುಖರೆಂದರೆ ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಆಗಿದ್ದನು. ಅವನು ಖಝ್ರಜ್ ಗೋತ್ರದ ಅತ್ಯಂತ ಪ್ರಸಿದ್ಧ ಮುಖ್ಯಸ್ಥನಾಗಿದ್ದನು ಮತ್ತು ರಸೂಲುಲ್ಲಾಹ್(ಸ) ಅವರ ಮದೀನಾಕ್ಕೆ ಭೇಟಿ ನೀಡಿದ ಪರಿಣಾಮವಾಗಿ ಅವನ ನಾಯಕತ್ವದಿಂದ ವಂಚಿತನಾದ ಆಘಾತವನ್ನು ಅನುಭವಿಸಿದನು. ಈ ವ್ಯಕ್ತಿಯು ಬದ್ರ್ ನಂತರ ಸ್ಪಷ್ಟವಾಗಿ ಮುಸಲ್ಮಾನನಾದನು, ಆದರೆ ಅವನು ಇಸ್ಲಾಂ ಧರ್ಮದ ವಿರುದ್ಧ ದ್ವೇಷ ಮತ್ತು ಅಸೂಯೆಯಿಂದ ತುಂಬಿದನು ಮತ್ತು ಕಪಟಿಗಳ ನಾಯಕನಾದ ಅವನು ಇಸ್ಲಾಂ ಮತ್ತು ರಸೂಲುಲ್ಲಾಹ್(ಸ)ರ ವಿರುದ್ಧ ರಹಸ್ಯವಾಗಿ ಪಿತೂರಿಯನ್ನು ಪ್ರಾರಂಭಿಸಿದನು. ಹಾಗಾದರೆ ಈ ವ್ಯಕ್ತಿ ಕೆಲವೊಮ್ಮೆ ಇಸ್ಲಾಂ ಧರ್ಮಕ್ಕೆ ಹೇಗೆ ಅತ್ಯಂತ ಸೂಕ್ಷ್ಮ ಪರಿಸ್ಥಿತಿಯನ್ನು ತಂದಿದ್ದಾನೆ ಎಂಬುದು ನಂತರದ ಘಟನೆಗಳಿಂದ ತಿಳಿಯುತ್ತದೆ. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ–376–377)

ಬನೂ ಸುಲೈಂ ಮತ್ತು ಬನೂ ಗ್ರತ್‌ಫಾನಿನ ಜನರು ಮದೀನದ ಮೇಲೆ ದಾಳಿ ನಡೆಸಲು ತಯಾರಿ ಮಾಡುತ್ತಿದ್ದಾರೆ ಎಂದು ಬದ್ರಿನಿಂದ ಮರಳಿ ಬಂದಾಗ ಹಝ್‌ರತ್ ಪೈಗಂಬರ್(ಸ)ರಿಗೆ ಸುದ್ದಿ ಲಭಿಸಿತು. ಕರ್ಕರಾಹ್ ಅಲ್–ಕುದ್ರ್ ಸ್ಥಳದಲ್ಲಿ ಮತ್ತು ಮದೀನಾದ ಮೇಲೆ ದಾಳಿ ನಡೆಸಲು ಯೋಜಿಸುತ್ತಿದ್ದರು. ಕರ್ಕರತ್–ಉಲ್–ಕುದ್ರ್ ಸಮತಟ್ಟಾದ ಮೈದಾನದಲ್ಲಿ ಒಂದು ಚಿಲುಮೆಯಾಗಿತ್ತು ಮತ್ತು ಅದಕ್ಕೆ ಅದರ ಹೆಸರನ್ನು ಇಡಲಾಗಿದೆ. ಮಕ್ಕಾದಿಂದ ಸಿರಿಯಾಕ್ಕೆ ನಜ್ದ್‌ಗೆ ಹೋಗುವ ಹೆದ್ದಾರಿಯಲ್ಲಿ ಮದೀನಾದಿಂದ ತೊಂಬತ್ತಾರು ಮೈಲಿ ದೂರದಲ್ಲಿ ಇದು ಸಂಭವಿಸಿತು.

ಹೇಗಾದರೂ ಈ ಸುದ್ದಿ ಲಭಿಸಿದ ಕೂಡಲೇ ಹಝ್ರತ್ ಪೈಗಂಬರ್(ಸ) ಬನೂ ಸುಲೈಂ ಮತ್ತು ಬನೂ ಗ್ರತ್‌ಫಾನಿನ ಕಡೆಗೆ ಹೋಗಲು ತೀರ್ಮಾನಿಸಿದರು ಮತ್ತು ಮುನ್ನೂರು ಸಹಾಬಿಯರ ಜೊತೆಗೆ ಅವರು ಸ್ವತಃ ಕರ್ಕರತುಲ್ ಕುದ್ರ್ ಕಡೆಗೆ ಹೊರಟರು.

ಯುದ್ಧಕ್ಕೆ ಹೋಗುವ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಇಬ್ನ್ ಇಸ್‌ಹಾ ರವರ ಪ್ರಕಾರ, ರಸೂಲುಲ್ಲಾಹ್(ಸ) ಅವರು, ಬದ್ರ್ ಯುದ್ಧದಿಂದ ಹಿಂದಿರುಗಿದ ಏಳು ದಿನಗಳ ನಂತರ, ರಂಜಾನ್ ಮಾಸದ ಕೊನೆಯಲ್ಲಿ ಅಥವಾ ಶವ್ವಾಲ್ ಮಾಸದ ಆರಂಭದಲ್ಲಿ ಎರಡು ಹಿಜರಿಯಲ್ಲಿ ಈ ಅಭಿಯಾನಕ್ಕೆ ತೆರಳಿದರು. ತಬಖಾತ್ ಇಬ್ನೆ ಸಾಅದ್‌ನಲ್ಲಿ ಗ್ಜಝ್ವ ಬನೂ ಸುಲೈಮ್ ಯುದ್ಧವು 6 ಜಮಾದಿಉಲ್ ಊಲಾದಲ್ಲಿ ಸಂಭವಿಸಿದೆ. ವಾಕಿದಿಯ ಪ್ರಕಾರ, ಯುದ್ಧವು ಮುಹರಂನ ಅರ್ಧಭಾಗದಲ್ಲಿ, ಮೂರು ಹಿಜ್ರಿಯಲ್ಲಿ ನಡೆಯಿತು. ವಾಕಿದಿಯ ಹೆಚ್ಚಿನ ವರದಿಗಳು ಸಾಮಾನ್ಯವಾಗಿ ದುರ್ಬಲವಾಗಿವೆ. ಈ ದಂಡಯಾತ್ರೆಯನ್ನು ಈ ಯುದ್ಧದ ನೇತೃತ್ವವು ರಸೂಲುಲ್ಲಾಹ್ (ಸ) ಅವರು ಸ್ವತಃ ವಹಿಸಿಕೊಂಡಿದ್ದರು. ಮತ್ತು ಹಝ್ರತ್ ಅಲಿ (ರ) ಅವರ ಧ್ವಜಧಾರಿಯಾಗಿದ್ದರು ಮತ್ತು ಇಸ್ಲಾಮಿಕ್ ಧ್ವಜದ ಬಣ್ಣವು ಬಿಳಿಯಾಗಿತ್ತು. (ಸೀರತುಲ್ ಹಲಬೀಯ, ಸಂಪುಟ–2, ಪುಟ–281, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–27, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಅಸ್ಸೀರತುನ್ನಬವೀಯ ಲಿಇಬ್ನೆ ಇಸ್‌ಹಾಖ್, ಸಂಪುಟ–1, ಪುಟ–319, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2004) (ಕಿತಾಬುಲ್ ಮಗ್ಝಾಝಿ ಲಿಲ್‌ವಾಖದಿ, ಸಂಪುಟ–1, ಪುಟ–182, ಆಲಿಮುಲ್ ಕುತುಬ್ ಬೈರೂತ್ 1984) (ಫರ್ಹಂಗ್ ಸೀರತ್, ಪುಟ–242, ಮುಜಮುಲ್ ಬಲದಾನ್, ಸಂಪುಟ–4, ಪುಟ–501, ಪುಟ–33, ಪುಟ–624)

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಮದೀನಾದಲ್ಲಿ ಹಝ್ರತ್ ಅಬ್ದುಲ್ಲಾ ಇಬ್ನ್ ಉಮ್ ಮಕ್ತೂಮ್(ರ) ಅವರಿಗೆ ತಮ್ಮ ಉಪನಾಯಕರಾಗಿ ಗೌರವವನ್ನು ನೀಡಿದರು. ಈ ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ಅವರು ಹಝ್ರತ್ ಸಬಾ ಬಿನ್ ಉರ್ಫುತಾ ಗಫಾರಿ ಅವರನ್ನು ಮದೀನಾದಲ್ಲಿ ತಮ್ಮ ಉಪನಾಯಕರನ್ನಾಗಿ ನೇಮಿಸಿದರು ಎಂದು ಹೇಳಲಾಗುತ್ತದೆ. ಆದಾಗ್ಯೂ, ಈ ಎರಡು ವಿಷಯಗಳನ್ನು ಹಝ್ರತ್ ಸಿಬಾ ಅವರಿಗೆ ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ವಹಿಸಿಕೊಡಲಾಯಿತು ಮತ್ತು ಎಂದಿನಂತೆ ನಮಾಝುನ್ನು ನಿರ್ವಹಿಸಿ ಕೊಡಲು ಹಝ್ರತ್ ಅಬ್ದುಲ್ಲಾ ಇಬ್ನ್ ಉಮ್ ಮಕ್ತೂಮ್ ಅವರನ್ನು ನೇಮಿಸಲಾಯಿತು. (ಸೀರತುಲ್ ಹಲಬೀಯ, ಸಂಪುಟ 2, ಪುಟ 280, ಘಜ್ವಾ ಸುಲೈಮ್, ದಾರ್ ಅಲ್–ಕಿತಾಬ್ ಅಲ್–ಇಲ್ಮಿಯಾ, ಬೈರುತ್, 2002)

ಆದಾಗ್ಯೂ, ಮುಸ್ಲಿಮರ ಅಚಾನಕ್ಕಾದ ಆಗಮನದ ಸುದ್ದಿ ಕೇಳಿ ಬನೂ ಸುಲೈಂ ಮತ್ತು ಬನೂ ಗ್ರತ್‌ಫಾನ್ ಗೋತ್ರಗಳು ಭಯಗೊಂಡರು ಮತ್ತು ಓಡಿಕೊಂಡು ಪರ್ವತಗಳ ಶಿಖರಗಳಲ್ಲಿ ಅಡಗಿಕೊಂಡರು. (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–26, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ರಸೂಲುಲ್ಲಾಹ್ (ಸ) ಅವರು ಇಸ್ಲಾಮಿಕ್ ಸೈನ್ಯದೊಂದಿಗೆ ಕದರ್ ಕಣಿವೆಗೆ ತಲುಪಿದಾಗ, ಅವರು ಒಂಟೆಗಳು ಮತ್ತು ನೀರಿನ ಘಾಟ್‌ಗಳ ಹೆಜ್ಜೆಗುರುತುಗಳನ್ನು ನೋಡಿದರು, ಆದರೆ ರಸೂಲುಲ್ಲಾಹ್(ಸ) ಅವರಿಗೆ ಆ ಪ್ರದೇಶದಲ್ಲಿ ಒಬ್ಬ ಶತ್ರು ಮನುಷ್ಯನನ್ನೂ ಕಾಣಲಿಲ್ಲ. (ಕಿತಾಬ್ ಅಲ್–ಮುಘಾಜಿ ಲಿಲ್–ವಕ್ಕಿ, ಸಂಪುಟ. 1, ಪುಟ. 182, ಘಜ್ವಾ ಕರಾತ್ ಅಲ್–ಕುದ್ರ್, ಆಲಂ ಅಲ್–ಕಿತಾಬ್, ಬೈರುತ್, 1984)

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಕಣಿವೆಯ ಮೇಲಿನ ಭಾಗಕ್ಕೆ ತಮ್ಮ ಸಹಚರರ ಗುಂಪನ್ನು ಕಳುಹಿಸಿದರು ಮತ್ತು ಯಾವುದೇ ಪ್ರತಿರೋಧವನ್ನು ಎದುರಿಸದೆ ಅವರು ಕಣಿವೆಯ ಹೃದಯಕ್ಕೆ ಹೋದರು. ಅಲ್ಲಿ, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಈ ಗೋತ್ರಗಳ ಕೆಲವು ಕುರುಬರನ್ನು ಕಂಡುಕೊಂಡರು, ಅವರಲ್ಲಿ ಯಾಸರ್ ಎಂಬ ಗುಲಾಮನೂ ಇದ್ದನು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ಬನೂ ಸುಲೈಮ್ ಮತ್ತು ಗ್ರತ್‌ಫಾನ್ ಜನರ ಬಗ್ಗೆ ಕೇಳಿದರು. ಅವರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ಉತ್ತರಿಸಿದನು. ನಾನು ಒಂಟೆಗಳಿಗೆ ನೀರುಣಿಸಲು ಬಂದಿರುವೆನು. ಕೆಲವರು ಐದನೇ ದಿನದಲ್ಲಿ ಹಿಂದಿರುಗುತ್ತಾರೆ, ಕೆಲವರು ನಾಲ್ಕನೇ ದಿನ, ಮತ್ತು ಸ್ಥಳೀಯರು ಬುಗ್ಗೆಗಳಿಗೆ ಹೋದರು, ಆದರೆ ಒಂಟೆಗಳ ಹಿಂಡಿನೊಂದಿಗೆ ನಾವು ಈ ವಿಷಯದಿಂದ ಸಾಕಷ್ಟು ಪ್ರತ್ಯೇಕವಾಗಿರುತ್ತೇವೆ. ಆದಾಗ್ಯೂ, ಈ ಜನರು ಯುದ್ಧದ ಉದ್ದೇಶದಿಂದ ಬಂದಿದ್ದರಿಂದ, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಒಂಟೆಗಳು ಮತ್ತು ಕುರುಬರನ್ನು ಬಂಧಿಸಿದರು. ಅಲ್ಲಿ ಮೂರು ರಾತ್ರಿ ತಂಗಿದ್ದರು. ಒಂದು ವರದಿಯ ಪ್ರಕಾರ ಹತ್ತು ರಾತ್ರಿ ಅಲ್ಲೇ ತಂಗಿದ್ದರು.

ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರು ಕೆಲವು ದಿನಗಳು ಅಲ್ಲಿ ತಂಗಿದರು. ಈ ಕಾಲಾವಧಿಯಲ್ಲಿ ಯಾರಿಗೂ ಹಝ್‌ರತ್ ಪೈಗಂಬರ್(ಸ)ರ ಮುಂದೆ ಬರಲು ಧೈರ್ಯ ಉಂಟಾಗಲಿಲ್ಲ. ಈ ರೀತಿಯಾಗಿ ಅವರು ಯಾವುದೇ ಯುದ್ಧವಿಲ್ಲದೆ ವಿಜಯಶಾಲಿಯಾಗಿ ಮರಳಿದರು.

(ಶರ್ಹ್ ಅಲ್–ಜುರ್ಕಾನಿ ಅಲಿ ಅಲ್–ಮವಾಹಿಬ್ ಅಲ್–ದಾನಿ, ಸಂಪುಟ 2, ಪುಟ 345, ಘಜ್ವಾ ಬನಿ ಸುಲೈಮ್, ದಾರ್ ಅಲ್–ಕಿತಾಬ್ ಅಲ್–ಇಲ್ಮೀಯ, ಬೈರುತ್, 1996)

ಒಂದು ವರದಿಯ ಪ್ರಕಾರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಗೆ ಯುದ್ಧ ಸಂಪತ್ತಿನಲ್ಲಿ ಪಡೆದ ಒಂಟೆಗಳ ಸಂಖ್ಯೆ ಐನೂರು ಎಂದು ಹೇಳಲಾಗಿದೆ. ಏಕೆಂದರೆ ಈ ಜನರು ಯುದ್ಧದ ಉದ್ದೇಶದಿಂದ ಬಂದಿದ್ದ ಕಾರಣದಿಂದ ಆ ಕಾಲದ ರೂಢಿಯಂತೆ ಅವರ ಸಂಪತ್ತನ್ನು ವಶಪಡಿಸುವುದು ಅನುಮತನೀಯವಾಗಿತ್ತು. ಅದು ಯುದ್ಧ ಸಂಪತ್ತಾಗಿತ್ತು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಅದರ ಐದನೇ ಭಾಗವನ್ನು ತೆಗೆದರು. ಮತ್ತುಳಿದ ನಾನೂರನ್ನು ಮುಸ್ಲಿಮರಲ್ಲಿ ಹಂಚಲಾಯಿತು. ಪ್ರತಿ ಮುಜಾಹಿದ್ ಎರಡು ಒಂಟೆಗಳನ್ನು ಪಡೆದರು. ಈ ಸೇನೆಯು

ಇನ್ನೂರು ಮುಜಾಹಿದೀನ್‌ಗಳನ್ನು ಒಳಗೊಂಡಿತ್ತು. ಯಸಾರ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಭಾಗದಲ್ಲಿ ಬಂದಾಗ ಅವರು(ಸ) ಅವನನ್ನು ಸ್ವತಂತ್ರಗೊಳಿಸಿದರು. ಕುರುಬನಾಗಿದ್ದವನು ಸ್ವತಂತ್ರನಾದನು. ಈ ಅಭಿಯಾನಕ್ಕಾಗಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಹದಿನೈದು ದಿನಗಳ ಕಾಲ ಮದೀನಾದಿಂದ ಹೊರಗಿದ್ದರು.

(ಸಬ್ಲುಲ್ ಹುದಾ ವರ್‍ರಶಾದ್ ಫಿ ಸಿರತ್ ಖೈರ್ ಅಲ್-ಅಬಾದ್, ಸಂಪುಟ 4, ಪುಟ 172, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1993)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಸೀರತ್ ಖಾತಮನ್ನಬೀಈನ್(ಸ) ನಲ್ಲಿ ಈ ವಿವರಗಳನ್ನು ಈ ಕೆಳಗಿನಂತೆ ಬರೆದಿದ್ದಾರೆ: ಹಿಜ್ರತಿನ ನಂತರ, ಮಕ್ಕಾದ ಖುರೈಷರು ವಿವಿಧ ಅರಬ್ ಗೋತ್ರಗಳನ್ನು ಭೇಟಿ ಮಾಡಿದರು ಮತ್ತು ಅನೇಕ ಗೋತ್ರಗಳನ್ನು ಮುಸ್ಲಿಮರಿಗೆ ಮಾರಣಾಂತಿಕ ಶತ್ರುಗಳನ್ನಾಗಿ ಮಾಡಿದರು. ಈ ಗೋತ್ರಗಳಲ್ಲಿ, ಶಕ್ತಿ ಮತ್ತು ಗುಂಪಿನ ದೃಷ್ಟಿಯಿಂದ ಪ್ರಮುಖವಾದವು ಅರೇಬಿಯಾದ ಮಧ್ಯ ಪ್ರದೇಶವಾದ ನಜ್ದ್‌ನಲ್ಲಿ ವಾಸಿಸುವ ಎರಡು ಬುಡಕಟ್ಟುಗಳು, ಅವರ ಹೆಸರುಗಳು ಬನು ಸುಲೈಮ್ ಮತ್ತು ಬಾನು ಗ್ರತ್ಫಾನ್ ಆಗಿದ್ದರು. ಮಕ್ಕಾದ ಖುರೈಶ್ ಈಗ ನಜ್ದ್ ಪ್ರದೇಶದತ್ತ ತಮ್ಮ ಗಮನವನ್ನು ಹರಿಸಿದರು ಮತ್ತು ಈ ಪ್ರದೇಶದ ಬುಡಕಟ್ಟುಗಳೊಂದಿಗೆ ನಿಕಟ ಸಂಬಂಧವನ್ನು ಸ್ಥಾಪಿಸಿದರು, ಮತ್ತು ಆ ಸಮಯದ ನಂತರ ಸುಲೈಮ್ ಮತ್ತು ಗ್ರತ್ಫಾನ್ ಗೋತ್ರಗಳು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಉಗ್ರ ಶತ್ರುಗಳಾಗಿದ್ದವು ಮತ್ತು ಅವರ ಈ ದ್ವೇಷವು ಮುಸ್ಲಿಮರ ವಿರುದ್ಧ ಪ್ರಾಯೋಗಿಕ ರೂಪವನ್ನು ಪಡೆಯಿತು. ಆದ್ದರಿಂದ, ಖುರೈಶ್‌ನ ಪ್ರಚೋದನೆಯ ಪರಿಣಾಮವಾಗಿ ಮತ್ತು ಅಬು ಸುಫ್ಯಾನ್‌ನ ಪ್ರಾಯೋಗಿಕ ಉದಾಹರಣೆಯ ಪರಿಣಾಮವಾಗಿ, ಅವರು ಮದೀನಾವನ್ನು ಆಕ್ರಮಣ ಮಾಡಲು ನಿರ್ಧರಿಸಿದರು.

ಇದು ಓರಿಯಂಟಲಿಸ್ಟ್ ಆಗಿದ್ದಾರೆ, ಅವರು ಒಟ್ಟಿಗೆ ಸೇರಿ ಮದೀನದ ಮೇಲೆ ಆಕ್ರಮಣ ಮಾಡಲು ಬಯಸಿದ್ದರು ಎಂದು ಅವರು ಒಪ್ಪಿಕೊಂಡಿದ್ದಾರೆ ಆದ್ದರಿಂದ ಅವರು ಅವರೊಂದಿಗೆ ವರ್ತಿಸಿದ ವರ್ತನೆಗಳು ಹಾಗೂ ಅವರು ಪಡೆದ ಯುದ್ಧ ಸಂಪತ್ತು ಸಂಪೂರ್ಣವಾಗಿ ಧರ್ಮಬದ್ಧವಾಗಿತ್ತು.

ಆದಾಗ್ಯೂ, ಮುಂದುವರಿಸುತ್ತ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: "ಆದ್ದರಿಂದ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಬದ್ರ್‌ನಿಂದ ಹಿಂತಿರುಗಿದಾಗ, ಅವರು ಮದೀನಾಕ್ಕೆ ಆಗಮಿಸಿ ಕೆಲವೇ ದಿನಗಳಲ್ಲಿ ಸುಲೈಮ್ ಮತ್ತು ಗ್ರತ್ಫಾನ್ ಗೋತ್ರದ ಜನಾಂಗದವರ ದೊಡ್ಡ ಸೈನ್ಯವನ್ನು ಪಡೆದು ಮಸೀನದ ಮೇಲೆ ಆಕ್ರಮಣ ಮಾಡುವ ಉದ್ದೇಶದಿಂದ ಕರ್ಕರತುಲ್ ಕದ್ರ್‌ನಲ್ಲಿ ಬಂದು ಸೇರುತ್ತಿದ್ದಾರೆ ಎಂಬ ಮಾಹಿತಿಯನ್ನು ಪಡೆದರು. ಬದ್ರ್ ಯುದ್ಧಕ್ಕೆ ಹತ್ತಿರವಿರುವ ಈ ಮಾಹಿತಿಯು ಮುಸ್ಲಿಮರ ಮೇಲೆ ದಾಳಿ ಮಾಡುವ ಉದ್ದೇಶದಿಂದ ಖುರೈಶ್ ಸೈನ್ಯವು ಮೆಕ್ಕಾವನ್ನು ತೊರೆದಾಗ, ಖುರೈಶ್ ನಾಯಕರು ಅದೇ ಸಮಯದಲ್ಲಿ ಸುಲೈಮ್ ಮತ್ತು ಗ್ರತ್ಫಾನ್ ಗೋತ್ರಗಳಿಗೆ ನೀವು ಇನ್ನೊಂದು ಕಡೆಯಿಂದ ಆಕ್ರಮಣ ನಡೆಸಿರಿ ಎಂದು ಸಂದೇಶವನ್ನು ಕಳುಹಿಸಿರಬೇಕು. ಅಥವಾ ಅಬು ಸುಫ್ಯಾನ್ ತನ್ನ ಕಾರವಾನ್‌ನೊಂದಿಗೆ ತಪ್ಪಿಸಿಕೊಂಡಾಗ, ಅವನು ಈ ಗೋತ್ರದವರನ್ನು ಸಂದೇಶವಾಹಕ ಇತ್ಯಾದಿಗಳ ಮೂಲಕ ಮುಸ್ಲಿಮರ ವಿರುದ್ಧ ಹೊರಡಲು ಪ್ರಚೋದಿಸಿದಿರಬೇಕು. ಆದಾಗ್ಯೂ, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಬದ್ರ್ ಯುದ್ಧವನ್ನು ಮುಗಿಸಿ ಮದೀನಾಗೆ ತಲುಪಿದಾಗ, ಸುಲೈಮ್ ಮತ್ತು ಗ್ರತ್ಫಾನ್ ಗೋತ್ರಗಳು ಮುಸ್ಲಿಮರ ಮೇಲೆ ದಾಳಿ ಮಾಡಲು ಹೊರಟಿದ್ದಾರೆ ಎಂಬ ಭಯಾನಕ ಸುದ್ದಿ ಅವರಿಗೆ ಲಭಿಸಿತು. ಈ ಸುದ್ದಿಯನ್ನು ಕೇಳಿದ ಅವರು ತಕ್ಷಣ ತಮ್ಮೊಂದಿಗೆ ಸಹಚರರ ಗುಂಪನ್ನು ಕರೆದುಕೊಂಡು ಮುನ್ನೆಚ್ಚರಿಕೆಯಾಗಿ ನಜ್ದ್‌ಗೆ ಹೊರಟರು, ಆದರೆ ಅವರು ಹಲವಾರು ದಿನಗಳ ನೋವಿನ ಪ್ರಯಾಣದ ನಂತರ ಮೌಜಾ ಅಲ್-ಕುದ್ರ್‌ನ ಕರ್ಕರಾ, ಅಂದರೆ ಬಯಲು ಪ್ರದೇಶಕ್ಕೆ ತಲುಪಿದಾಗ, ಬನೂ ಸುಲೈಮ್ ಹಾಗೂ ಗ್ರತ್ಫಾನ್ ಗೋತ್ರದ ಜನರು ಇಸ್ಲಾಮಿನ ಸೈನ್ಯದ ಆಗಮನದ ಸುದ್ದಿ ಕೇಳಿ ಹತ್ತಿರದ ಪರ್ವತ ಶಿಖರಗಳನ್ನು ಏರಿದ್ದಾರೆ ಎಂದು ಅರಿವಾಯಿತು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ಹುಡುಕಲು ಮುಸ್ಲಿಮರ ಗುಂಪನ್ನು ಕಳುಹಿಸಿದರು ಮತ್ತು ಸ್ವತಃ ಬತನ್ ಕಣಿವೆಯತ್ತ ಸಾಗಿದರು, ಆದರೆ ಅವರ ಯಾವುದೇ ಕುರುಹು ಕಂಡುಬಂದಿಲ್ಲ. ಆದಾಗ್ಯೂ, ಅವರ ಒಂಟೆಗಳ ದೊಡ್ಡ ಹಿಂಡು ಕಣಿವೆಯಲ್ಲಿ ಮೇಯುತ್ತಿರುವುದು ಕಂಡುಬಂದಿತು, ಅದು ಯುದ್ಧದ ನಿಯಮಗಳ ಅಡಿಯಲ್ಲಿ ಸಹಾಬರವರು ಅದನ್ನೆಲ್ಲ ಸೆರೆಹಿಡಿಯಲ್ಪಟ್ಟಿತು, ತದನಂತರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಮದೀನಾಕ್ಕೆ ಹಿಂದಿರುಗಿದರು. ಈ ಒಂಟೆಗಳ ಕುರುಬನು ಯಸಾರ್ ಎಂಬ ಗುಲಾಮನಾಗಿದ್ದನು, ಅವನು ಒಂಟೆಗಳೊಂದಿಗೆ ಸೆರೆಯಲ್ಲಿದ್ದನು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಒಡನಾಟವು ಈ ವ್ಯಕ್ತಿಯ ಮೇಲೆ ಎಷ್ಟು ಪ್ರಭಾವ ಬೀರಿತು ಎಂದರೆ ಅವರು ಮುಸ್ಲಿಮ್ ಆಗಲು ಬಹಳ ಸಮಯವಾಗಲಿಲ್ಲ, ಮತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ಸ್ವತಂತ್ರಗೊಳಿಸಿದರು. ಆದರೆ ಆತನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮರಣದ ತನಕ ಸೇವೆಸಲ್ಲಿಸಿದನು. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-452-453)

ಹಿಜ್ರತಿನ ನಂತರ ಹಝ್ರತ್ ಪೈಗಂಬರ್(ಸ) ಹಿಜರೀ 2, ಶವ್ವಾಲ್ ಮಾಸದಲ್ಲಿ ಅಲ್ಲಾಹನ ಆಜ್ಞೆ ಪ್ರಕಾರ ಮುಸ್ಲಿಮರ ಮೊದಲ ಈದುಲ್ ಫಿತ್ರನ್ನು ಆಚರಿಸಿದರು.

(ದೈರಾ ಮಾರಿಫ್ ಸೀರತ್ ಮುಹಮ್ಮದ್ ರಸುಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಸಂಪುಟ 6, ಪುಟ 362, ದಾರುಲ್ ಮಆರಿಫ್ ಲಾಹೋರ್ 2022 ರಿಂದ ಪ್ರಕಟಿಸಲಾಗಿದೆ)

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ ಅವರು ಕೇಳಿದರು: ಜಾಹಿಲಿಯತ್‌ನ ಅವಧಿಯಲ್ಲಿ ನೀವು ಆಚರಿಸುತ್ತಿದ್ದ ಎರಡು ದಿನಗಳ ವಾಸ್ತವತೆ ಹಾಗೂ ಸ್ಥಿತಿ ಏನಾಗಿತ್ತು? ಅದಕ್ಕೆ ಅಲ್ಲಿದ್ದವರು ಹೇಳಿದರು. ಈ ಮೊದಲು ಇಂದಿಗೂ ಆಚರಣೆಯಲ್ಲಿರುವ ರೀತಿಯಲ್ಲಿಯೇ ಈ ಹಬ್ಬವನ್ನು ಆಚರಿಸುತ್ತಿದ್ದೆವು. ಅವರು ಹೇಳಿದರು: ಅಲ್ಲಾಹನು ನಿಮಗೆ ಈ ಎರಡು ಹಬ್ಬಗಳಿಗಿಂತ ಉತ್ತಮ ದಿನಗಳನ್ನು ನಿಗದಿಪಡಿಸಿದ್ದಾನೆ. ಸಹಾಬರವರು ಬಹಳ ಕುತೂಹಲದಿಂದ ಕೇಳಿದರು ಅವು ಯಾವುವು ಯಾ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ಈದ್-ಉಲ್-ಫಿತರ್ ಮತ್ತು ಈದ್-ಉಲ್-ಅಧಾ. ಈ ದಿನಗಳಲ್ಲಿ ಯಾವುದೇ ವ್ಯಕ್ತಿ ಉಪವಾಸ ಇರಿಸಬಾರದು. ಬದಲಾಗಿ ತಿಂದು ಕುಡಿದು ಖುಶಿಯನ್ನು ಆಚರಿಸಬೇಕು.

ಎರಡೂ ಈದ್‌ಗಳ ವೇಳೆಗಳಲ್ಲಿ ಹಝ್ರತ್ ಪೈಗಂಬರ್(ಸ) ಮದೀನದ ಪೂರ್ವ ದಿಕ್ಕಿನಲ್ಲಿ ಇರುವ ಈದ್‌ಗಾಹ್‌ಗೆ ಹೋಗುತ್ತಿದ್ದರು. ಈದ್ ಗಾಹ್ ಮದೀನಾದ ಪೂರ್ವ ಭಾಗದಲ್ಲಿತ್ತು. ರಸೂಲುಲ್ಲಾಹ್(ಸ) ಅವರು ಈದ್ ದಿನದಂದು ಈದ್‌ಗಾಹ್‌ಗೆ ಒಂದು ಮಾರ್ಗದಿಂದ ಹೋಗುತ್ತಿದ್ದರು ಮತ್ತು ಇನ್ನೊಂದು ಮಾರ್ಗದಿಂದ ಹಿಂತಿರುಗುತ್ತಿದ್ದರು. ಒಮ್ಮೆ ರಸೂಲುಲ್ಲಾಹ್(ಸ) ಅವರು ಈದ್-ಉಲ್-ಫಿತರ್ ನಮಾಝನ್ನು ಮಸ್ಜಿದೆ ನಬವಿಯಲ್ಲಿ ನಿರ್ವಹಿಸಿದರು ಏಕೆಂದರೆ ಆ ಪ್ರಾರ್ಥನೆಯ ಸಮಯದಲ್ಲಿ ಭಾರೀ ಮಳೆಯಾಗುತ್ತಿತ್ತು. (ಎನ್‌ಸೈಕ್ಲೋಪೀಡಿಯಾ ಆಫ್ ಸೀರತ್-ಉಲ್-ನಬಿ, ಸೈಯದ್ ಖಾಸಿಮ್ ಮಹ್ಮೂದ್, ಸಂಪುಟ-1, ಪುಟ-411, ಮಕ್ತಾಬಾ ಅಲ್-ಫೈಸಲ್ ಲಾಹೋರ್ 2014)

ಈದ್ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಈದ್-ಉಲ್-ಫಿತ್ರ್ ಬಗ್ಗೆ ಹೀಗೆ ಬರೆದಿದ್ದಾರೆ: "ರಮಝಾನ್‌ನ ಉಪವಾಸಗಳು ಕಡ್ಡಾಯವಾದ ನಂತರ ರಮಝಾನ್‌ನ ಕೊನೆಯಲ್ಲಿ ರಸೂಲುಲ್ಲಾಹ್(ಸ) ಅವರು ಅಲ್ಲಾಹನ ಆಜ್ಞೆಯಿಂದ ಸದಖತುಲ್ ಫಿತರ್‌ನ ಆದೇಶವನ್ನು ಜಾರಿಗೊಳಿಸಿದರು. ಪ್ರತಿಯೊಬ್ಬ ಮುಸ್ಲಿಮನು ತನ್ನ ಪರವಾಗಿ ಮತ್ತು ತನ್ನ ಕುಟುಂಬ ಮತ್ತು ಅವಲಂಬಿತರ ಪರವಾಗಿ ಒಬ್ಬ ವ್ಯಕ್ತಿಗೆ ಒಂದು ಸಾ (ಅಂದರೆ 234 ತೋಲ) ಖರ್ಜೂರ, ದ್ರಾಕ್ಷಿ, ಬೆಲ್ಲ ಅಥವಾ ಗೋದಿ ಇತ್ಯಾದಿಗಳನ್ನು ಸದಖವನ್ನು ಈದ್‌ಗಿಂತ ಮುಂಚೆ ಪಾವತಿಸಲು ಆಜ್ಞಾಪಿಸಿದರು. ಈ ಸದಖವು ಬಡವರಲ್ಲಿ, ನಿರ್ಗತಿಕರಲ್ಲಿ ಮತ್ತು ವಿಧವೆಯರಲ್ಲಿ ಮತ್ತಿತರರಲ್ಲಿ ಹಂಚಲಾಗುವುದು ಇದರಿಂದಾಗಿ ಸಮರ್ಥ ಜನರು ಉಪವಾಸದ ದೌರ್ಬಲ್ಯಗಳನ್ನು ಸರಿಪಡಿಸುತ್ತಾರೆ ಮತ್ತು ಈದ್ ಸಂದರ್ಭದಲ್ಲಿ ಬಡವರಿಗೆ ಸಹಾಯದ ಒಂದು ಮಾರ್ಗ ತೆರವುಗೊಳಿಸಲಾಯಿತು. ಆದ್ದರಿಂದ, ರಸೂಲುಲ್ಲಾಹ್(ಸ) ಅವರ ಆದೇಶದ ಪ್ರಕಾರ, ಪ್ರತಿ ರಮಝಾನಿನ ಈದ್‌ನ ಮೊದಲು, ಸದಖತುಲ್ ಫಿತ್ರ್ ಅನ್ನು ಪ್ರತಿ ಮುಸ್ಲಿಂ, ಪುರುಷ ಮತ್ತು ಸ್ತ್ರೀಯರಿಂದ ನಿಯಮಿತವಾಗಿ ಸಂಗ್ರಹಿಸಿ, ಅನಾಥರು, ನಿರ್ಗತಿಕರು ಮತ್ತು ಬಡವರಿಗೆ ವಿತರಿಸಲಾಗುತ್ತಿತ್ತು.

ಅದೇ ವರ್ಷದಲ್ಲಿ ಈದ್-ಉಲ್-ಫಿತರ್ ಕೂಡ ಪ್ರಾರಂಭವಾಯಿತು, ಅಂದರೆ, ರಂಜಾನ್ ತಿಂಗಳ ಅಂತ್ಯದ ನಂತರ ಮುಸ್ಲಿಮರು ಶವ್ವಾಲ್‌ನ ಮೊದಲ ದಿನದಂದು ಈದ್ ಅನ್ನು ಆಚರಿಸಬೇಕೆಂದು ರಸೂಲುಲ್ಲಾಹ್(ಸ) ಅವರು ಆದೇಶಿಸಿದರು.

ಸರ್ವಶಕ್ತನಾದ ಅಲ್ಲಾಹನು ನಮಗೆ ರಂಜಾನ್‌ನ ಆರಾಧನೆಯನ್ನು ಮಾಡಲು ಅವಕಾಶವನ್ನು ನೀಡಿದ್ದಾನೆ ಎಂಬ ಸಂತೋಷದಲ್ಲಿ ಈ ಈದ್ ಇದೆ. ಆದರೆ ಈ ಸಂತೋಷವನ್ನು ವ್ಯಕ್ತಪಡಿಸಲು ರಸೂಲುಲ್ಲಾಹ್(ಸ) ಒಂದೇ ಒಂದು ಆರಾಧನೆಯನ್ನು ನೇಮಿಸಿರುವುದು ದೊಡ್ಡ ಗೌರವವಾಗಿದೆ.

ಹೀಗಾಗಿ, ಈದ್ ದಿನದಂದು, ಎಲ್ಲಾ ಮುಸ್ಲಿಮರು ಒಂದು ತೆರೆದ ಸ್ಥಳದಲ್ಲಿ ಒಟ್ಟುಗೂಡಬೇಕು ಮತ್ತು ಮೊದಲು ಎರಡು ರಕಾತ್ ನಮಾಝನ್ನು ನಿರ್ವಹಿಸಬೇಕು ಮತ್ತು ನಂತರ ಈ ನಮಾಝ್ ನಂತರ, ಅವರು ಖಂಡಿತವಾಗಿಯೂ ಬಾಹ್ಯವಾಗಿ ಹಬ್ಬವನ್ನು ಆಚರಿಸಬೇಕು, ಏಕೆಂದರೆ ಆತ್ಮವು ಸಂತೋಷವಾಗಿರುವಾಗ, ದೇಹಕ್ಕೂ ಸಂತೋಷವಾಗಿರಲು ಹಕ್ಕಿದೆ. ವಾಸ್ತವವಾಗಿ, ಇಸ್ಲಾಂ ಈದ್‌ಗಳನ್ನು ಸಾಮೂಹಿಕವಾಗಿ ನಿರ್ವಹಿಸುವ ಎಲ್ಲಾ ಪ್ರಮುಖ ಆರಾಧನೆಗಳ ಕೊನೆಯಲ್ಲಿ ಇರಿಸಿದೆ, ಆದ್ದರಿಂದ ನಮಾಝ್‌ಗಳ ಈದ್ ಜುಮುಅ ಆಗಿದೆ, ಇದು ಪ್ರತಿ ವಾರದ ನಮಾಝ್‌ಗಳ ನಂತರ ಬರುತ್ತದೆ ಮತ್ತು ಇಸ್ಲಾಂನಲ್ಲಿನ ಎಲ್ಲಾ ಈದ್ಗಳಿಗಿಂತ ಉತ್ತಮವೆಂದು ಪರಿಗಣಿಸಲಾಗಿದೆ. ನಂತರ ಉಪವಾಸದ ಈದ್ ರಂಜಾನ್ ನಂತರ ಬರುವ ಈದ್-ಉಲ್-ಫಿತರ್, ಮತ್ತು ಹಜ್‌ನ ಈದ್ ಈದ್-ಉಲ್-ಅಧಾ, ಇದು ಹಜ್ಜ್‌ನ ಎರಡನೇ ದಿನದಂದು ಆಚರಿಸಲಾಗುತ್ತದೆ ಮತ್ತು ಈ ಎಲ್ಲಾ ಈದ್ಗಳು ಸ್ವತಃ ಆರಾಧನಾ ಕಾರ್ಯಗಳಾಗಿವೆ. ಆದ್ದರಿಂದ, ಇಸ್ಲಾಮಿನ ಈದ್ ಹಬ್ಬಗಳು ತನ್ನೊಳಗೆ ಒಂದು ವಿಸ್ಮಯಕರವಾದ ವೈಭವವನ್ನು ಹೊಂದಿದೆ ಮತ್ತು ಅವುಗಳು ಇಸ್ಲಾಮಿನ ಸತ್ಯತೆ ಬಗ್ಗೆ ಬಹಳಷ್ಟು ಬೆಳಕು ಬೀರುತ್ತವೆ. ಮುಸ್ಲಿಮರ ಪ್ರತಿಯೊಂದು ಕೆಲಸವನ್ನು ದೇವಸ್ಮರಣೆಯೊಂದಿಗೆ ಜೋಡಿಸಲು ಯಾವ ರೀತಿಯಲ್ಲಿ ಇಸ್ಲಾಂ ಬಯಸುತ್ತದೆ ಎಂದು ಅಂದಾಜು ಮಾಡಲು ಸಂದರ್ಭ ಸಿಗುತ್ತದೆ.

ಆದ್ದರಿಂದ ಈದ್‌ಗಳ ಪ್ರಾಮುಖ್ಯತೆ ಎಂದರೆ ಅದು ಯಾವಾಗಲೂ ಸಂತೋಷ ಮಾತ್ರವಲ್ಲ, ಸರ್ವಶಕ್ತನಾದ ಅಲ್ಲಾಹನನ್ನು ಸಹ ನೆನಪಿಸಿಕೊಳ್ಳಬೇಕು ಮತ್ತು ಆರಾಧಿಸಬೇಕು ಎಂದಾಗಿದೆ.

ಅವರು ಮುಂದೆ ಹೇಳುತ್ತಾರೆ: "ನಾನು ಇತಿಹಾಸದಿಂದ ನಿರ್ಗಮಿಸಬೇಕಾಗುತ್ತದೆ, ಇಲ್ಲದಿದ್ದರೆ ಇಸ್ಲಾಂ ಧರ್ಮವು ಮುಸ್ಲಿಮರ ಪ್ರತಿಯೊಂದು ಚಲನೆಯನ್ನು, ಪ್ರತಿಯೊಂದು ಮಾತು ಮತ್ತು ಕ್ರಿಯೆಯನ್ನು ದೇವರ ಸ್ಮರಣೆಯ ಹುಳಿಯನ್ನು ಹೇಗೆ ನೀಡಿದೆ ಎಂದು ನಾನು ವಿವರಿಸುತ್ತಿದ್ದೆ. ದಿನನಿತ್ಯದ ಕಾರ್ಯಗಳಲ್ಲಿ ಅಂದರೆ ಕುಳಿತುಕೊಳ್ಳುವುದರಲ್ಲಿ, ನಡೆಯುವುದರಲ್ಲಿ, ಮಲಗುವುದರಲ್ಲಿ, ಊಟ ಮಾಡುವುದರಲ್ಲಿ, ಸ್ನಾನ ಮಾಡುವುದರಲ್ಲಿ, ಬಟ್ಟೆ ಬದಲಾಯಿಸುವುದರಲ್ಲಿ, ಯಾವುದಾದರು ವಸ್ತುವನ್ನು ಖರೀದಿಸುವುದರಲ್ಲಿ ಅಥವಾ ಮಾರುವುದರಲ್ಲಿ, ಪಾದರಕ್ಷಗಳನ್ನು ಧರಿಸುವುದರಲ್ಲಿ, ಮನೆಯಿಂದ ಹೊರಗೆ ಹೋಗುವುದರಲ್ಲಿ, ಮನೆಯೊಳಗೆ ಬರುವುದರಲ್ಲಿ, ಪ್ರವಾಸಕ್ಕೆ ಹೋಗುವುದರಲ್ಲಿ,

ಪ್ರವಾಸದಿಂದ ಹಿಂತಿರುಗುವುದರಲ್ಲಿ, ಏನನ್ನಾದರೂ ಮಾರಾಟ ಮಾಡುವುದರಲ್ಲಿ, ಖರೀದಿಸುವುದರಲ್ಲಿ ದೈನಂದಿನ ಎತ್ತರ ಹತ್ತುವುದರಲ್ಲಿ, ಎತ್ತರದಿಂದ ಇಳಿಯುವುದರಲ್ಲಿ, ಮಸೀದಿ ಪ್ರವೇಶಿಸುವುದರಲ್ಲಿ, ಮಸೀದಿಯಿಂದ ಹೊರಗೆ ಬರುವುದರಲ್ಲಿ, ಮಿತ್ರರನ್ನು ಭೇಟಿಯಾಗುವುದರಲ್ಲಿ, ಶತ್ರುವನ್ನು ಎದುರಿಸುವುದರಲ್ಲಿ, ಚಂದ್ರ ನೋಡುವುದರಲ್ಲಿ, ಪತ್ನಿಯ ಬಳಿ ಹೋಗುವುದರಲ್ಲಿ, ಹೀಗೆ ಎಲ್ಲಾ ಕಾರ್ಯಗಳನ್ನು ಆರಂಭಿಸುವಾಗ ಹಾಗೂ ಅದನ್ನು ಮುಗಿಸುವಾಗ, ಸೀನುವುದು ಮತ್ತು ಕೆಮ್ಮುವುದರಲ್ಲಿಯೂ ಹೇಗೋ ದೇವರ ಸ್ಮರಣೆಯೊಂದಿಗೆ ಸಂಬಂಧಿಸಲಾಗಿದೆ."

ಆದ್ದರಿಂದ ಇದು ಇಸ್ಲಾಂ ಧರ್ಮದ ಬೋಧನೆಯಾಗಿದ್ದು, ಪ್ರತಿಯೊಬ್ಬ ನಿಜವಾದ ಮುಸಲ್ಮಾನನು ಯಾವಾಗಲೂ ನಮ್ಮ ಮುಂದೆ ಇರಿಸಬೇಕಾಗಿದೆ, ಸರ್ವಶಕ್ತನಾದ ಅಲ್ಲಾಹನು ಎಲ್ಲಾ ಸಮಯದಲ್ಲೂ, ಎಲ್ಲದರಲ್ಲೂ ನಮ್ಮ ಮುಂದೆ ಇರುತ್ತಾನೆ ಎಂಬ ಆಲೋಚನೆ ಇರಬೇಕು.

"ಈ ಪರಿಸ್ಥಿತಿಯಲ್ಲಿ, ಅರಬ್ಬರ ಬಹುದೇವತಾವಾದಿಗಳು ಪ್ರವಾದಿ ಮುಹಮ್ಮದ್(ಸ)ರ ಬಗ್ಗೆ ಹೇಳಿದರೆ, ಅವರು ನಿಜವಾಗಿಯೂ ಈ ಬೋಧನೆಯನ್ನು ತಂದವರು ಆದರೆ ಅವಿಶ್ವಾಸಿಗಳ ಅಭಿಪ್ರಾಯದಲ್ಲಿ, ಅವರು ಈ ಬೋಧನೆಯ ಸೃಷ್ಟಿಕರ್ತ, ಅವರು ಮುಹಮ್ಮದ್ (ಸ) ಅವರನ್ನು ಅಲ್ಲಾಹನ ಜುನೂನ್ (ಹುಚ್ಚುತನ) ಆಗಿತ್ತು ಎಂದು ಹೇಳಿದರೆ ಅದರಲ್ಲಿ ಯವುದೇ ಆಶ್ಚರ್ಯದ ಮಾತಿಲ್ಲ. ವಾಸ್ತವವಾಗಿ, ಲೌಕಿಕ ಮನುಷ್ಯನು ಹುಚ್ಚುತನದ ಹೊರತಾಗಿ ಈ ಸಂಗತಿಗಳನ್ನು ನೋಡಲಾರನು, ಆದರೆ ತನ್ನ ಅಸ್ತಿತ್ವದ ವಾಸ್ತವವನ್ನು ಅರ್ಥಮಾಡಿಕೊಂಡವನು ಜೀವನ ಎಂದರೆ ಇದೇ ಆಗಿದೆ ಎಂದು ಅರಿತುಕೊಳ್ಳುತ್ತಾನೆ. (ಸೀರತ್ ಖಾತಮನ್ನಬೀಈನ್, ಸಾಹಿಬ್‌ಝಾದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–337–338) ನಿಜವಾದ ಜೀವನ ಎಂದರೆ ದೇವರ ಸ್ಮರಣೆಯು ಯಾವಾಗಲು ಮನಸ್ಸಿನಲ್ಲಿರಬೇಕು.

ಬದ್ರ್ ಯುದ್ಧದ ನಂತರ ಮತ್ತು ಉಹದ್ ಯುದ್ಧಕ್ಕೆ ಮೊದಲು ಎರಡು ಸಂಶಯಕರವಾದ ಘಟನೆಗಳ ಪ್ರಸ್ತಾಪ ಲಭಿಸುತ್ತದೆ. ಅವುಗಳನ್ನು ಮೇಲ್ಮೇಲಿಂದ ನೋಡಿದರೂ ಕೂಡ ಇದು ಕಟ್ಟುಕಥೆ ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಮೊದಲ ಘಟನೆ ಅಸ್ಮಾ ಬಿಂತ್ ಮರ್ವಾನ್‌ನ ಹತ್ಯೆಯಾಗಿದೆ. ಅವರು ಕೊಲ್ಲಲ್ಪಟ್ಟರು ಎಂದು ಹೇಳಲಾಗುತ್ತದೆ ಮತ್ತು ಅದರ ವಿವರಣೆ ಹೀಗಿದೆ ಹಝ್ರತ್ ಉಮೈರ್ ಬಿನ್ ಆದಿ ಖತ್ಮಿ ಕುರುಡು ಸಹಚರರಾಗಿದ್ದರು. ಹಝ್ರತ್ ಉಮೈರ್ ಬನು ಖತ್ಮೀ ಎಂಬ ಗೀತ್ರದಲ್ಲಿ ಇಸ್ಲಾಂಗೆ ಮತಾಂತರಗೊಂಡ ಮೊದಲ ವ್ಯಕ್ತಿಯಾಗಿದ್ದರು. ಇದು ಹಿಜ್ರತ್ತಿನ ಎರಡನೇ ವರ್ಷವಾಗಿತ್ತು. ರಂಜಾನ್‌ನ ಐದು ರಾತ್ರಿಗಳು ಉಳಿದಿತ್ತು. ಹಝ್ರತ್ ಪೈಗಂಬರ್(ಸ) ಉಮೈರ್ ಬಿನ್ ಆದಿ ಖತ್ಮಿ ಅವರನ್ನು ಯಹೂದಿ ಮಹಿಳೆ ಮತ್ತು ಇಸ್ಲಾಂಗೆ ಮತಾಂತರಗೊಂಡ ಮರ್ಸದ್ ಬಿನ್ ಝೈದ್ ಬಿನ್ ಹುಸೇನ್ ಅನ್ಸಾರಿ(ರ)ಯವರ ಪತ್ನಿ ಅಸ್ಮಾ ಬಿನ್ತ್ ಮರ್ವಾನ್ ಅವರ ಬಳಿಗೆ ಕಳುಹಿಸಿದರು. ಅಸ್ಮಾ ಬಿಂತ್ ಮರ್ವಾನ್ ಳನ್ನು ವಧಿಸುವುದಕ್ಕೆ ಕಾರಣ ಆಕೆಯು ಇಸ್ಲಾಮ್ ಧರ್ಮವನ್ನು ನಿಂದಿಸುತ್ತಿದ್ದಳು. ಮತ್ತು ಹಝ್ರತ್ ಪೈಗಂಬರ್(ಸ) ಅವರ ವಿರುದ್ಧ ಜನರನ್ನು ಎತ್ತಿಕಟ್ಟಿ ಕವಿತೆಗಳನ್ನು ವಾಚಿಸುತ್ತಿದ್ದಳು ಮತ್ತು ಇಸ್ಲಾಮ್ ಧರ್ಮವನ್ನು ನಿಂದಿಸುತ್ತಿದ್ದಳು ಎಂಬ ಕಾರಣ ಆಕೆಯನ್ನು ವಧಿಸಲಾಗಿದೆ ಎಂದು ಹೇಳಲಾಗುತ್ತದೆ. ಒಂದು ವರದಿಯ ಪ್ರಕಾರ ಈ ಮಹಿಳೆ ಮಸ್ಜಿದೆ ನಬವಿಯಲ್ಲಿ ಕೊಳಕು ಬಟ್ಟೆಗಳನ್ನು ತೆಗೆದುಕೊಂಡು ಅಲ್ಲಿ ಹಾಕುತ್ತಿದ್ದಳು. ಈ ಕಟ್ಟುಕಥೆಯನ್ನು ಮಾಡಲು ಈ ವರದಿಯೊಂದಿಗೆ ಇದನ್ನು ಸಹ ಸೇರಿಸಲಾಗಿದೆ. ಮತ್ತು ಈ ರೀತಿಯಲ್ಲಿ ಅವಳು ಹಝ್ರತ್ ಪೈಗಂಬರ್(ಸ) ಮತ್ತು ಮುಸ್ಲಿಮರನ್ನು ನೋಯಿಸುತ್ತಿದ್ದಳು. ಹಝ್ರತ್ ಉಮೈರ್(ರ) ಅವರು ರಾತ್ರಿಯ ಕತ್ತಲಲ್ಲಿ ಅವರ ಮನೆಗೆ ಪ್ರವೇಶಿಸಿದರು. ಅವರ ಪ್ರಕಾರ, ಹಝ್ರತ್ ಪೈಗಂಬರ್(ಸ) ಆದೇಶಿಸಿದಾಗ, ಅವರು ರಾತ್ರಿಯ ಕತ್ತಲೆಯಲ್ಲಿ ಈ ಮಹಿಳೆಯ ಮನೆಗೆ ಹೋದರು, ಅವರ ಮಕ್ಕಳು ಅವಳ ಸುತ್ತಲೂ ಮಲಗಿದ್ದರು ಮತ್ತು ಅವಳು ಮಗುವಿಗೆ ಹಾಲುಣಿಸುತ್ತಿದ್ದಳು. ಉಮೈರ್(ರ) ತನ್ನ ಕೈಯಿಂದ ಅವಳನ್ನು ಹಿಡಿದು ಮಗುವನ್ನು ಅವಳಿಂದ ಎಳೆದು ತನ್ನ ಕತ್ತಿಯನ್ನು ಅವಳ ಎದೆಯ ಮೇಲೆ ಇರಿಸಿ ಅದನ್ನು ಎಷ್ಟು ಬಲದಿಂದ ಎಳೆದರು ಎಮದರೆ ಆ ಕತ್ತಿಯು ಅವಳ ಸೊಂಟದ ಮೂಲಕ ಹಾದುಹೋಯಿತು. ತದನಂತರ ಉಮೈರ್ ಬಿನ್ ಆದಿ ಮದೀನಾಕ್ಕೆ ಬಂದು ಹಝ್ರತ್ ಪೈಗಂಬರ್(ರ) ಅವರ ಹಿಂದೆ ಫಜರ್ ನಮಾಝ್ ನಿರ್ವಹಿಸಿದರು. ಹಝ್ರತ್ ಪೈಗಂಬರ್(ಸ)ರವರು ನಮಾಝ್ ಮುಗಿಸಿ ಎದ್ದಾಗ ಅವರು ಉಮೈರ್ ಅನ್ನು ಕಂಡರು. ಅವರು(ಸ) ಅವರನ್ನು ಕೇಳಿದರು, ನೀವು ಮರ್ವಾನ್‌ನ ಮಗಳನ್ನು ಕೊಂದಿದ್ದೀರಾ? ಅದಕ್ಕೆ ಅವರು ಹೌದು ಎಂದರು. ಆಕೆಯ ಕೊಲೆಯ ಪರಿಣಾಮವಾಗಿ ನಾನು ಏನಾದರೂ ಪಾಪ ಮಾಡಿದ್ದೇನೆಯೇ? ಈಗ ಅವರು ಕೇಳುತ್ತಿದ್ದಾರೆ. ಒಂದೆಡೆ, ಹಝ್ರತ್ ಪೈಗಂಬರ್(ಸ) ಅವರು ಸ್ವತಃ ಅವರನ್ನು ಕಳುಹಿಸಿದ್ದಾರೆ ಎಂದು ಬರೆಯಲಾಗಿದೆ. ಈಗ ಕೊಲೆ ಮಾಡಿ ನಾನೇನು ಪಾಪ ಮಾಡಿದ್ದೇನೆ ಎಂದು ಕೇಳುತ್ತಿದ್ದಾರೆ. ಪ್ರತಿಕ್ರಿಯೆಯಾಗಿ, ಅವರು(ಸ) ಅರೇಬಿಕ್ ಭಾಷೆಯಲ್ಲಿ **ಲಾ ಯನ್‌ತತಿಹು ಫೀಹಾ ಅನ್‌ಝಾನಿ** ಎಂದು ಹೇಳಿದರು ಮತ್ತು ಆದ್ದರಿಂದ, ಎರಡು ಆಡುಗಳು ಪರಸ್ಪರ ಜಗಳವಾಡುವುದಿಲ್ಲ ಎಂದು ಹೇಳಿದರು. ಅದೇನೆಂದರೆ, ಈ ಮಹಿಳೆಯ ಹತ್ಯೆಯು ಎಷ್ಟು ಹೇಯ ಮತ್ತು ಕ್ಷುಲ್ಲಕವಾಗಿದೆ ಎಂದರೆ ಅದನ್ನು ವಿರೋಧಿಸುವವರೂ ಇದನ್ನು ವಿರೋಧಿಸುವುದಿಲ್ಲ. ಹಝ್ರತ್ ಪೈಗಂಬರ್(ಸ) ಅವರನ್ನು ಹೊರತುಪಡಿಸಿ ಯಾರ ನಾಲಿಗೆಯಿಂದ ಕೇಳಿರದ ಪದಗಳಲ್ಲಿ ಈ ಪದ ಅಥವಾ ಗಾದೆಯೂ ಒಂದು ಎಂದು ಅವರು ಬರೆಯುತ್ತಾರೆ. ಇದು ಇಲ್ಲಿ ಕಂಡು ಬರುವ ವರದಿಯಾಗಿದೆ. ಆದಾಗ್ಯೂ, ಈ ಘಟನೆಯ ನಂತರ, ಹಝ್ರತ್ ಪೈಗಂಬರ್ (ಸ) ಉಮೈರ್ ಹೆಸರನ್ನು ಬಸೀರ್ ಎಂದು ಬದಲಾಯಿಸಿದರು, ಅಂದರೆ ದೃಷ್ಟಿವುಳ್ಳವನು. ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಹೇಳಿದರು, ದೇವರಿಗೆ ವಿಧೇಯನಾಗಿ ರಾತ್ರಿಯನ್ನು ಕಳೆದ ಕುರುಡನನ್ನು ನೋಡಿ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು ಆತನನ್ನು ಕುರುಡ ಎಂದು ಹೇಳಬೇಡಿ ಬದಲಿಗೆ ಬಸೀರ್ ಎಂದು ಕರೆಯಿರಿ.

ಒಂದು ವರದಿಯಲ್ಲಿ, ಅಸ್ಮಾಳ ವಧೆಯ ಘಟನೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ: ಹಝ್ರತ್ ಪೈಗಂಬರ್(ಸ), ಅಸ್ಮಾ ಬಿಂತ್ ಮರ್ವಾನ್ ಅವರನ್ನು ಕೊಲ್ಲಲು ಉದ್ದೇಶಿಸಿದಾಗ, ಅವರು ಜನರಿಗೆ ಹೇಳಿದರು, ಈ ಮಹಿಳೆಯಿಂದ ಉಳಿಸಬಲ್ಲವರು ಯಾರಾದರೂ ಇದ್ದಾರೆಯೇ? ಅದಕ್ಕೆ ಉಮೈರ್ ಬಿನ್ ಆದಿ ಅವರು ಈ ಕೆಲಸವನ್ನು ಪೂರ್ಣಗೊಳಿಸುವುದು ನನ್ನ ಜವಾಬ್ದಾರಿಯಾಗಿದೆ ಎಂದು ಹೇಳಿದರು. ನಂತರ ಅವರು ಅಸ್ಮಾ ಬಳಿ ತಲುಪಿದರು. ಆ ಮಹಿಳೆ ಖರ್ಜೂರ ಮಾರುತ್ತಿದ್ದಳು. ಉಮೈರ್ ಆಕೆಯ ಮುಂದೆ ಇರಿಸಿದ್ದ ಖರ್ಜೂರವನ್ನು ತೋರಿಸಿ, ಇವುಗಳಿಗಿಂತ ಉತ್ತಮವಾದ ಖರ್ಜೂಗಳು ನಿಮ್ಮ ಬಳಿ ಇದೆಯೇ? ಎಂದು ಕೇಳಿದರು ಅದಕ್ಕೆ ಆಕೆ ಹೌದು ಎಂದು ಹೇಳಿ ತನ್ನ ಮನೆಯೊಳಗೆ ಹೋಗಿ ಖರ್ಜೂರವನ್ನು ತೆಗೆದುಕೊಳ್ಳಲು ಬಾಗಿದಳು. ಅವರು ಹೇಳುತ್ತಾರೆ ನಾನು ಎಡ ಮತ್ತು ಬಲಕ್ಕೆ ನೋಡಿ ಆಕೆಯ ತಲೆಗೆ ಹೊಡೆದು ವಧಿಸಿದೆ. ನಂತರ ಹಝ್ರತ್ ಪೈಗಂಬರ್(ಸ) ಸಹಾಬಿಗಳಿಗೆ ಹೇಳಿದರು, ನೀವು ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ಬೆಂಬಲಿಸುವ ವ್ಯಕ್ತಿಯನ್ನು ನೋಡಲು ಬಯಸಿದರೆ, ಅವರು ಉಮೈರ್ ಬಿನ್ ಅದಿ ಅವರನ್ನು ನೋಡಿ.

ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಅಸ್ಮಾ ಬಿಂತ್ ಮರ್ವಾನ್ ಅವರ ರಕ್ತವನ್ನು ಅನುಮತಿಸಲಾಗಿದೆ ಎಂದು ಘೋಷಿಸಿದಾಗ, ಹಝ್ರತ್ ಉಮೈರ್(ರ)ರವರು ಹರಕೆ ಎತ್ತಿದ್ದರು. ಅದೇನೆಂದರೆ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರನ್ನು ಬದ್ರ್ ಕದನದ ನಂತರ ಸುರಕ್ಷಿತವಾಗಿ ಮದೀನಾಗೆ ಹಿಂದಿರುಗಿಸಿದರೆ ನಾನು ಅಸ್ಮಾಳನ್ನು ವಧಿಸುತ್ತೇನೆ. ಅಂದರೆ ಬದರ್ ಯುದ್ಧದ ಮುಂಚೆ ಈ ಆದೇಶ ನೀಡಿದ್ದರು ಹೀಗಾಗಿ ಅವರು ನಾನು ಯುದ್ಧದಿಂದ ಹಿಂದಿರುಗಿದರೆ ಆಕೆಯನ್ನು ವಧಿಸುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದರು. ಆದ್ದರಿಂದ, ಹಝ್ರತ್ ಪೈಗಂಬರ್(ಸ) ಬದ್ರ್‌ನಿಂದ ವಿಜಯಶಾಲಿಯಾಗಿ ಮದೀನಾಕ್ಕೆ ಹಿಂದಿರುಗಿದಾಗ, ಹಝ್ರತ್ ಉಮೈರ್(ರ) ತನ್ನ ಪ್ರತಿಜ್ಞೆಯನ್ನು ಪೂರೈಸಲು ಅಸ್ಮಾ ಅವರ ಮನೆಗೆ ಹೋಗಿ ಅವಳನ್ನು ವಧಿಸಿದರು. ಅಸ್ಮಾ ಬಿಂತ್ ಮರ್ವಾನ್ ಅವಳನ್ನು ವಧಿಸಿದ ನಂತರ, ಹಝ್ರತ್ ಉಮೈರ್(ರ) ಈ ನೆರೆಹೊರೆಗೆ ಹಿಂದಿರುಗಿದಾಗ, ಈ ಮಹಿಳೆಯ ಪುತ್ರರು ತಮ್ಮ ತಾಯಿಯನ್ನು ಗುಂಪಿನೊಂದಿಗೆ ದಫನ್ ಮಾಡುತ್ತಿದ್ದರು ಎಂಬ ವರದಿ ಇದೆ. ಉಮೈರ್ ನನ್ನು ಅವರು ನೋಡಿ, ಉಮೈರ್ ನೀನು ಆಕೆಯನ್ನು ವಧಿಸಿದ್ದೀಯಾ? ಎಂದು ಕೇಳಿದರು ಅದಕ್ಕೆ ಅವರು ಹೌದು ಎಂದರು. ಆಗ ಅವರು ಹೇಳಿದರು, **"ಫಕೀದುನಿ ಜಾಮಿಯಾ ಸುಮ್ಮಾ ಲಾ ತುನ್‌ಝಿರೋನಿ"** ಹಾಗಾಗಿ ನೀವೆಲ್ಲರೂ ಸೇರಿಕೊಂಡು ನನ್ನ ವಿರುದ್ಧ ಸಂಚು ರೂಪಿಸಿ, ನಂತರ ನನಗೆ ಬಿಡುವು ನೀಡಬೇಡಿ. ನಾನು ದೇವರ ಮೇಲೆ ಪ್ರಮಾಣ ಮಾಡುತ್ತೇನೆ! ನನ್ನ ಜೀವ ಯಾರ ಕೈಯಲ್ಲಿದೆ, ನೀವೆಲ್ಲರೂ ಈ ಮಹಿಳೆ ಹೇಳುತ್ತಿದ್ದಂತೆಯೇ ಹೇಳಿದರೆ, ನಾನು ಹುತಾತ್ಮನಾಗುವವರೆಗೆ ಅಥವಾ ನೀವು ಸೆರೆಹಿಡಿಯುವವರೆಗೆ ನನ್ನ ಈ ಕತ್ತಿಯಿಂದ ನಿಮ್ಮ ಕುತ್ತಿಗೆಯನ್ನು ಕತ್ತರಿಸಲು ಪ್ರಾರಂಭಿಸುತ್ತೇನೆ, ನಾನು ನರಕವನ್ನು ಮಾಡುತ್ತೇನೆ. ಆ ದಿನದಿಂದ, ಬನು ಖಿತಮಾ ಗೋತ್ರದಲ್ಲಿ ಇಸ್ಲಾಂ ಬಹಿರಂಗವಾಗಿ ಹರಡಲು ಪ್ರಾರಂಭಿಸಿತು, ಇಲ್ಲದಿದ್ದರೆ ಅದಕ್ಕಿಂತ ಮೊದಲು ಇಸ್ಲಾಂಗೆ ಮತಾಂತರಗೊಂಡವರು ಸಹ ತಮ್ಮ ಮುಸ್ಲಿಂ ಸ್ಥಾನಮಾನವನ್ನು ಮರೆಮಾಡುತ್ತಿದ್ದರು.

ಅಲ್ಲಾಮ ಸುಹೈಲಿ ಅವರು ಅಸ್ಮಾಳನ್ನು ಕೊಂದದ್ದು ಆಕೆಯ ಪತಿ ಎಂದು ಬರೆದಿದ್ದಾರೆ ಮತ್ತು ಕಿತಾಬ್ ಇಸ್ತಿಯಾಬ್‌ನಲ್ಲಿ ಹಝ್ರತ್ ಉಮೈರ್ ಅವರು ಹಝ್ರತ್ ಪೈಗಂಬರ್(ಸ) ಅವರನ್ನು ನಿಂದಿಸುತ್ತಿದ್ದ ಕಾರಣ ಅವರ ಸಹೋದರಿಯನ್ನೂ ಕೊಂದಿದ್ದಾರೆ ಎಂದು ಬರೆಯಲಾಗಿದೆ. ಉಮೈರ್ ಅವರ ಸಹೋದರಿಯ ಹೆಸರನ್ನು ಇಸ್ತಿಯಾಬ್‌ನಲ್ಲಿ ಉಲ್ಲೇಖಿಸಲಾಗಿಲ್ಲ. (ಸಿರತ್ ಹಲಬಿಂಯಾಹ್ (ಅನುವಾದಕ) ಸಂಪುಟ 3, ಪುಟಗಳು 482 ರಿಂದ 485, ದಾರ್ ಅಲ್–ಇಶಾತ್ ಪಬ್ಲಿಷಿಂಗ್ ಹೌಸ್, ಕರಾಚಿ 2009)

ಇತಿಹಾಸ ಮತ್ತು ಜೀವನಚರಿತ್ರೆಯ ಕೆಲವು ಗ್ರಂಥಗಳಲ್ಲಿ ಈ ಘಟನೆಯ ಪ್ರಸ್ತಾಪವಿದೆ. ಆದರೆ ಸಹೀಹಾದ ಆರು ಹದೀಸ್ ಗ್ರಂಥಗಳಲ್ಲೋ ಹದೀಸಿನ ಯಾವುದೇ ಅಧಿಕೃತ ಗ್ರಂಥದಲ್ಲೋ ಇದರ ಪ್ರಸ್ತಾಪವಿಲ್ಲ.

ಸತ್ಯವೇನೆಂದರೆ, ನಂತರ ಕಾಲದ ಕೆಲವು ಜನರು ಈ ರೀತಿಯ ಕಟ್ಟುಕಥೆಗಳನ್ನು ತಮ್ಮ ಗ್ರಂಥಗಳಲ್ಲಿ ಬರೆದರು ಮತ್ತು ಪ್ರವಾದಿ ನಿಂದೆಗೆ ಸಂಬಂಧಿಸಿ ಇವುಗಳನ್ನು ಮುಂದಿರಿಸಿದರು. ಇಂದಿನ ಮುಲ್ಲಾಗಳು ಇಂತಹ ಘಟನೆಗಳನ್ನು ಉಲ್ಲೇಖಿಸಿ, ಪ್ರವಾದಿ ನಿಂದೆಯನ್ನು ಮಾಡುವವರನ್ನು ವಧಿಸಬೇಕು ಎಂದು ಸಾಬೀತುಪಡಿಸಲು ಪ್ರಯತ್ನಿಸುತ್ತಾರೆ. ಆದರೆ ಪ್ರವಾದಿನಿಂದೆಗೆ ಯಾವುದೇ ರೀತಿಯ ಶಿಕ್ಷೆ ಇಸ್ಲಾಮಿನಲ್ಲಿ ಇಲ್ಲ. ಇಂತಹ ಘಟನೆಗಳಿಗೆ ಯಾವುದೇ ಆಧಾರವಿಲ್ಲ.

ಉದಾಹರಣೆಗೆ ಈ ಹದೀಸನ್ನು ವಿಶ್ಲೇಷಣೆ ಮಾಡಿಕೊಂಡು ಓದುವುದಾದರೆ ಗೊತ್ತಾಗುವುದೇನೆಂದರೆ, ಇದು ಬಹಳ ದುರ್ಬಲ ಹದೀಸಾಗಿದೆ. ಮಾತ್ರವಲ್ಲ ಇದನ್ನು ನಕಲಿ ಮತ್ತು ನಿರ್ಮಿತ ಹದೀಸೆಂದು ಕೂಡ ಹೇಳಲಾಗಿದೆ. ಇದರ ಒಬ್ಬ ವರದಿಗಾರ ಮುಹಮ್ಮದ್ ಬಿನ್ ಅಮ್ರ್ ವಾಖದಿ ಸುಳ್ಳುಗಾರನಾಗಿದ್ದನು. (ಸಿಲ್‌ಸಿಲತುಲ್ ಅಹಾದೀಸ್ ಅಝ್ಝೀಫ ವಲ್ ಮೌಝೂಅ, ಸಂಪುಟ–13, ಪುಟ–34–35, ವರದಿ ಸಂಖ್ಯೆ–6013, ಮಕ್ತಬತುಲ್ ಮಾರಿಫ್ ಅರ್‍ರಿಯಾಝ್ 2004)

ಯುಕ್ತಿಯ ಆಧಾರದಲ್ಲಿ ನೋಡುವುದಾದರೆ ಈ ವರದಿಯ ಬಗ್ಗೆ ಅನೇಕ ಪ್ರಶ್ನೆಗಳು ಏಳುತ್ತವೆ. ಉದಾಹರಣೆಗೆ, ಈ ಸಹಾಬಿ ದೃಷ್ಟಿಹೀನರಾಗಿದ್ದರೂ ಆ ಮಹಿಳೆಯ ಮನೆಗೆ ಹೇಗೆ ಒಬ್ಬಂಟಿಯಾಗಿ ತಲುಪಿದರು? ಮಹಿಳೆಯನ್ನು ರಾತ್ರಿಯ ಅಂಧಕಾರದಲ್ಲಿ ಹೇಗೆ ಹುಡುಕಿ ಹಿಡಿದರು. ತಡಕಾಡುತ್ತಾ ಕಂಡುಹಿಡಿದರು ಎಂದಾದರೂ ಕೂಡ

ಯಾರೂ ಏಕೆ ಎಚ್ಚರಗೊಳ್ಳಲಿಲ್ಲ. ಆ ಮಹಿಳೆ ಮಗುವಿಗೆ ಹಾಲು ಕುಡಿಸುತ್ತಿದ್ದಾಳೆ ಎಂದು ಅವರು ತಡಕಾಡುತ್ತಾ ಹೇಗೆ ಗೊತ್ತುಮಾಡಿಕೊಂಡರು. ಮಾತ್ರವಲ್ಲ ವಧಿಸಲ್ಪಟ್ಟ ಮಹಿಳೆ ಮೃತ್ಯುವನ್ನು ತನ್ನ ಮುಂದೆ ನೋಡಿಯೂ ಏಕೆ ಪ್ರತಿರೋಧದ ಅಥವಾ ಹೋರಾಟದ ಪ್ರಯತ್ನ ಮಾಡಲಿಲ್ಲ. ಮಹಿಳೆಗೆ ನೋಡಲಿಕ್ಕೆ ಕಣ್ಣುಗಳಿದ್ದರೂ ಕೂಡ ಅವಳು ಬೊಬ್ಬೆ ಹೊಡೆಯದೇ ಇರಲು ಮತ್ತು ಹೋರಾಟ ನಡೆಸದೇ ಇರಲು ಕಾರಣವೇನು? ಆ ಮಹಿಳೆಯ ಪತಿ ಅಲ್ಲಿ ನಿದ್ದೆ ಮಾಡುತ್ತಿದ್ದನು. ಆತನಿಗೂ ಏನೂ ಗೊತ್ತಾಗದೇ ಇರಲು ಹೇಗೆ ಸಾಧ್ಯ? ಅತ್ಯಂತ ಮುಖ್ಯವಾದ ಸಂಗತಿಯೇನೆಂದರೆ, ಕುರುಡರು ಶಬ್ದವನ್ನು ಕೇಳಿ ಕಂಡುಹಿಡಿಯುತ್ತಾರೆ.

ಅವಳ ಯಾವುದೇ ಶಬ್ದವನ್ನು ಆಲಿಸದೇ ದೃಷ್ಟಿಹೀನ ಸಹಾಬಿಗೆ ಆ ಮಹಿಳೆ ಅಸ್ಮಾ ಬಿನ್ತ್ ಮರ್ವಾನ್ ಎಂದು ಹೇಗೆ ಗೊತ್ತಾಯಿತು? ಅವಳು ಖರ್ಜೂರವನ್ನು ತೆಗೆಯಲು ಒಳಗೆ ಹೋಗಿ ಖರ್ಜೂರವನ್ನು ಎತ್ತಲು ಬಾಗಿದಾಗ ಅವಳ ತಲೆಗೆ ಖಡ್ಗವನ್ನು ಬೀಸಿ ಅವಳನ್ನು ವಧಿಸಿದೆ ಎಂದು ಆ ದೃಷ್ಟಿಹೀನ ಸಹಾಬಿ ಹೇಳಿದ್ದಾಗಿಯೂ ಮತ್ತೊಂದು ವರದಿಯಲ್ಲಿ ಬಂದಿದೆ.

ಇನ್ನೊಂದು ವರದಿ ಏನೆಂದರೆ ಕಥೆಗಳೂ ವಿಭಿನ್ನವಾಗಿವೆ, ಈಗ ಎರಡನೇ ಕಥೆಯಲ್ಲಿ ಆ ಮಹಿಳೆ ಖರ್ಜೂರ ಪಡೆಯಲು ಒಳಗೆ ಹೋದಾಗ, ಸಹಾಬಿ ಸುತ್ತಲೂ ನೋಡಿದರು ಮತ್ತು ಯಾರೂ ಕಾಣಲಿಲ್ಲ ಎಂದು ಹೇಳಲಾಗುತ್ತದೆ. ಸಹಚರರು ಕುರುಡರಾಗಿದ್ದರು ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಹೀಗಿರುವಾಗ ಅವರು ಹೇಗೆ ನೋಡಲು ಸಾಧ್ಯ? ಮತ್ತು ಅವರು ನಾನು ಸುತ್ತಲೂ ನೋಡಿದಾಗ ಯಾರನ್ನೂ ನೋಡಲಿಲ್ಲ ಎಂದು ಅವರು ಹೇಗೆ ಹೇಳಬಹುದು, ಆದರೆ ಈಗಾಗಲೇ ಬಿದ್ದ ಖರ್ಜೂರಗಳನ್ನು ನೋಡಿದಾಗ, ಈ ಖರ್ಜೂರಗಳು ಉತ್ತಮವಾಗಿಲ್ಲ ಎಂದು ನಾನು ಅರಿತುಕೊಂಡೆ. ಕೈಯಿಂದ ನೋಡಿದೆ ಎಂದು ಯಾರಾದರೂ ಹೇಳಿದರೆ ಪರವಾಗಿಲ್ಲ, ಅಲ್ಲಿ ಇಲ್ಲಿ ನೋಡುವ ವಿಷಯ ಇನ್ನೂ ಹಾಗೆಯೇ ಇದೆ ಅಲ್ಲವೇ?

ಆ ಮಹಿಳೆಯನ್ನು ವಧಿಸಿದ ನಂತರ ಆ ಸಹಚರರು ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ಬಂದಾಗ ಮತ್ತು ಆಕೆಯ ಹತ್ಯೆಯ ಬಗ್ಗೆ ತಿಳಿಸಿದಾಗ ಮತ್ತು ಅವರು ಅಲ್ಲಿಗೆ ಹಿಂತಿರುಗಿದಾಗ, ಮಹಿಳೆಯ ಪುತ್ರರು ಅವರನ್ನು ಅಲ್ಲಿಯೇ ದಫನ್ ಮಾಡುತ್ತಿದ್ದರು ಎಂಬ ಹದೀಸ್ ಇದೆ. ಅವನು ಆಕೆಯನ್ನು ಕೊಲ್ಲುವಾಗ, ಆಕೆಯ ಮಕ್ಕಳು ಸ್ವಲ್ಪ ಸಮಯದೊಳಗೆ ಆಕೆಯನ್ನು ಎಫನ್ ಮಾಡಲು ಹೇಗೆ ಬರುತ್ತಾರೆ ಎಂಬುದನ್ನು ಪರಿಗಣಿಸುವುದು ಯೋಗ್ಯವಾಗಿದೆ. ಎಲ್ಲಾ ಕೆಲಸಗಳು ಅಲ್ಪಾವಧಿಯಲ್ಲಿ ತಕ್ಷಣವೇ ಮುಗಿದವು. ಇದು ನಮ್ಮ ಜನರ ಸಂಶೋಧನೆಯೂ ಆಗಿದೆ ಮತ್ತು ಇದನ್ನು ಹೊರತುಪಡಿಸಿ, ಈ ಘಟನೆಯು ಕಾಲ್ಪನಿಕ ಮತ್ತು ಕಟ್ಟುಕಥೆ ಎಂದು ಸಾಬೀತುಪಡಿಸುವ ಇತರ ವ್ಯತ್ಯಾಸಗಳೆಂದರೆ, ಹೆಚ್ಚಿನ ವರದಿಗಳಲ್ಲಿ, ಮಹಿಳೆಯ ಹೆಸರು ಅಸ್ಮಾ ಬಿಂತ್ ಮರ್ವಾನ್ ಎಂದಾಗಿದೆ ಆದರೆ ಅಲ್ -ಇಸ್ತಿಯಾಬ್‌ನ ಲೇಖಕರ ಪ್ರಕಾರ, ಆಕೆಯು ಅಸ್ಮಾ ಅಲ್ಲ, ಬದಲಿಗೆ ಉಮೈರ್ ಅವರ ಸಹೋದರಿ ಬಿಂತ್ ಆದಿಯಾಗಿದ್ದರು.

(ಅಲ್-ಇಸ್ತಿಯಾಬ್ ಫೀ ಮಾರಿಫತ್ ಅಲ್-ಸಹಾಬ, ಸಂಪುಟ 3, ಜಿಕ್ರ್ ಉಮೈರ್ ಬಿನ್ ಆದಿ ಅಲ್-ಖತಾಮಿ, ಪುಟ 291, ಮಕ್ತಾಬಾ ದಾರ್ ಅಲ್-ಕಿತಾಬ್ ಅಲ್-ಇಲಮಿಯಾ ಬೈರುತ್ 2002)

ಎರಡನೆಯದು, ಕೊಲೆಗಾರನ ಹೆಸರನ್ನು ಅನೇಕ ಕಡೆ ಉಮೈರ್ ಬಿನ್ ಆದಿ ಎಂದು ಉಲ್ಲೇಖಿಸಲಾಗಿದೆ, ಆದರೆ ಕೆಲವು ಸ್ಥಳಗಳಲ್ಲಿ ಅಮ್ರ್ ಬಿನ್ ಆದಿ ಕೂಡ ಆಗಿದೆ. (ಜಮಾ ಅಲ್-ಸೀರಾಹ್ ಲಿಇಬ್ನೆ ಹಝುಮ್, ಪುಟ 19, ದಾರುಲ್ ಕುತುಬ್ ಅಲ್‌ಇಲ್‌ಮಿಯಾ ಬೈರುತ್ 2003)

ಇಬ್ನೆ ದುರೈದ್ ಪ್ರಕಾರ, ಕೊಲೆಗಾರನ ಹೆಸರು ಗಿಶ್ಮಿರ್ತಾ ಎಂದಾಗಿದೆ.
(ಶರ್ಹ್ ಜರ್ಕಾನಿ ಅಲಿ ಅಲ್-ಮವಾಹಿಬ್ ಅಲ್-ದಿನಿಯಾ, ಭಾಗ 2, ಪುಟ 342, ದಾರ್ ಅಲ್-ಕಿತಾಬ್ ಅಲ್-ಇಲ್‌ಮಿಯಾ ಬೈರುತ್, 1996)

ಇತರ ಕೆಲವು ಹದೀಸ್‌ಗಳ ಪ್ರಕಾರ, ಮೇಲಿನ ಯಾರೂ ಕೊಲೆಗಾರರಲ್ಲ, ಆದರೆ ಈ ಮಹಿಳೆ ಖರ್ಜೂರವನ್ನು ಮಾರುತ್ತಿದ್ದಾಗ ಯಾರೋ ಈ ಮಹಿಳೆಯನ್ನು ಕೊಂದರು ಎಂದಾಗಿದೆ. (ಶರಹ್ ಝುರ್ಖಾನಿ ಅಲಲ್ ಮವಾಹಿಬ್ ಲಿದ್ದೀನಿಯ, ಭಾಗ-2, ಪುಟ-344, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

